ANNOUNCEMENT

MR. SPEAKER.—I have received the following massage from the Chairman, Legislative Council.

"As reqaired by Rule 106 of the Rules of Procedure and Conduct af Business in the Legislative Council, I send herewith THE ELECTRICITY (SUPPLY) (KARNATAKA AMENDMENT) BILL, 1981 which has been agreed to by the Legislative Council on 6th March, 1981".

Now we will take up Calling Attention Motions.

Representation by Member

Notice regarding distribution of handbills relating to strike by the employees of public sector undertakings.

† ಶ್ರೀ ಬಿ. ವಿ. ಕಕ್ಕಿಲ್ಲಾಯ.—ಸ್ವಾಮಿ, ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೆ. ಅದನ್ನು ತಮ್ಮ ಗಮನಕ್ಕೆ ತರುವುದಕ್ಕೋಸ್ಕರ ನನಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಸ್ವಾಮಿ ತಮಗೆ ನಿಲುವಳಿ ಸೂಚನೆಯಲ್ಲಿ ಏನು ಕಳುಹಿಸಿದ್ದೇನೆ ಅದರ ಜೊತೆಯಲ್ಲಿ ಒಂದು ಕರಪತ್ರವನ್ನು ಸಹ ತಮ್ಮ ಅವಗಾಹನೆಗೆ ಕಳುಹಿಸಿದ್ದೇನೆ. ಈಗ ನಮ್ಮ ರಾಜ್ಯದಲ್ಲಿ ಸುಮಾರು ೭೫ ದಿವಸಗಳಿಂದ ಸಾರ್ವಜನಿಕರ ಕೈಗಾರಿಕೆಗಳ ನೌಕರರ ಸಂಪು ನಡೆಯುತ್ತಿದೆ. ಇದನ್ನು ಯಾವ ರೀತಿಯಲ್ಲಾದರೂ ಬಗೆಹರಿಸಬೇಕೆಂದು ಈ ಸದನದಲ್ಲಿ ನಾವು ಹಲವಾರು ಬಾರಿ ಚರ್ಚೆ ನಡೆಸಿದ್ದೇವೆ. ಮುಖ್ಯಮಂತ್ರಿಗಳಿಗೆ ನಾವು ಒಂದು ಸೂಚನೆಯನ್ನು ಕೊಟ್ಟಿದ್ದೇವೆ. ವಿರೋಧಪಕ್ಷದವರಾದ ನಮ್ಮ ಸೂಚನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ವಾಗತ ಮಾಡಿದ್ದಾರೆ. ಇವತ್ತು ನಾಲ್ಕು ಗಂಟೆಗೆ ವಿರೋಧ ಪಕ್ಷದ ಸದಸ್ಯರನ್ನು ಕರೆದು ಈ ಮಾಪ್ಕರದ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಅವರು ಯೋಚನೆ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ಪರಿಷತ್ತಿನ (ಎನ್.ಎಸ್.ಯು.ಐ) ಅಧ್ಯಕ್ಷರಾದ ಶ್ರೀ ನಾಗಭೂಷಣ ಆರಾಧ್ಯ ಎನ್ನುವವರು ಒಂದು ಕರಪತ್ರವನ್ನು ಹೊರಡಿಸಿದ್ದಾರೆ. ಅದರಲ್ಲಿ ನಿನು ಹೇಳಿದ್ದಾರೆಂದರೆ ಈ "We demand that the soft pendling attitude of our Chief Minister with JAF and its leaders be changed" ಎಂದು ಕರಪತ್ರದಲ್ಲಿ ಹೇಳಿದ್ದಾರೆ. ಇದರ ಫೋರಣೆ ಏನು ? ಇದರ ಬಗ್ಗೆ ಏನ ಮಾಡಬೇಕು ? ಎನ್ನುವ ಪ್ರಶ್ನೆ ಬರುತ್ತದೆ. ಈ ರಾಜ್ಯದಲ್ಲಿ ಇಂಥ ಒಂದು ಕಾರ್ಮಿಕರು ಸಂಪು ನಡೆಯುತ್ತಿರುವಾಗ ಇದನ್ನು ಬಗೆಹರಿಸಲು ಯಾವ ರೀತಿ ವ್ಯವಹಾರ ಮಾಡಬೇಕು ಎನ್ನುವುದು ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟಿದ್ದು ಈ ಕಾರ್ಮಿಕರು ರಾಜ್ಯದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಲಾ ಅಂಡ್ ಆರ್ಡರ್ ಬಗ್ಗೆ ಮುಖ್ಯ ಮಂತ್ರಿಗಳೇ ಗೃಹ ಸಚಿವರು ಆಗಿರುವುದರಿಂದ ಇದು ಅವರ ವ್ಯಾಪ್ತಿಗೆ ಒಳಪಟ್ಟಿದೆ. ಆದಕಾರಣ ಅವರು ಇದರಲ್ಲಿ ವ್ಯವಹರಿಸುತ್ತಾರೆ. ಅವರು ತಮಗೆ ತೋರಿದಂತೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ. ಒಂದು ಭಾಗದ ಜನ ಇದರ ಬಗ್ಗೆ ಪೋರಾಡಿದರೆ ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಪ್ರಧಾನ ಮಂತ್ರಿಗಳಿಗೆ ಅವರು ಬರೆದ ಹಾಗೆ ಒಂದು ಕರಪತ್ರವನ್ನು ಮುದ್ರಿಸಿ ಅಂತಹ ಸಾವಿರಾರು ಪ್ರತಿಗಳನ್ನು ಮಾಡಿ ಬೆಂಗಳೂರು ನಗರದಲ್ಲಿ ಜನಗಳಿಗೆಲ್ಲ ಹಂಚಿದ್ದಾರೆ.

ಎರಡನೆಯದಾಗಿ ಮುಖ್ಯವಾಗಿ ಕರ್ನಾಟಕ ರಾಜ್ಯಕ್ಕೆ ಅದರಲ್ಲೂ ಬೆಂಗಳೂರಿಗೆ ಬೇರೆ ಬೇರೆ ಭಾಷೆಯನ್ನು ಮಾತನಾಡತಕ್ಕಂತಹ ಜನ ಬೇರೆ ಬೇರೆ ಭಾಗಗಳಿಂದ ಬಂದಿರತಕ್ಕಂತಹವರು ಇದ್ದಾರೆ. ಕೇಂದ್ರ ಸರ್ಕಾರಕ್ಕೆ ಸೇರಿದ ಈ ಉದ್ಯಮಗಳಲ್ಲಿ ರಾಷ್ಟ್ರದ ಬೇರೆ ಬೇರೆ ಭಾಗಗಳಿಂದ ಬಂದ ಜನಗಳು ನೌಕರರಾಗಿದ್ದಾರೆ. ಇಂಥಹವರು ಸಾವಿರಾರು ಮಂದಿ ಇದ್ದಾರೆ. ಇವರ ಬಗ್ಗೆ ಏನು ಹೇಳಿದ್ದಾರೆ ಎಂದರೆ, "We demand your Hon'ble self to send Tamilians and Keralites

away from Karnataka as the heritage of our beloved Karnataka is at Stake, within one week failing which the NSUI will stop water/lights/ration and social boycott of these anti-social elements''. ರಾಷ್ಟ್ರದ ಎಲ್ಲಾ ಭಾಗಗಳಿಂದ ಬಂದಂತಹ ಜನಗಳು ಈ ಕೇಂದ್ರ ಸರ್ಕಾರದ ಉದ್ದಿಮೆಯಲ್ಲಿ ನೌಕರರಾಗಿದ್ದಾರೆ. ನ್ಯಾಷನಲ್ ಸೆಕ್ಯೂರಿಟಿ ಆಕ್ಟನ್ನು ಪಾರ್ಲಿಮೆಂಟಿನಲ್ಲಿ ಪಾಸ್ ಮಾಡಿದ್ದಾರೆ.

ಅಧ್ಯಕ್ಷರು.—ಆ ಕರಪತ್ರದ ಕಾಪಿ ನನ್ನ ಹತ್ತಿರವೂ ಇದೆ. ಆದ್ದರಿಂದ ಅದರ ಬಗ್ಗೆ ಏನು ಹೇಳುವುದು ಬೇಡಿ.

ಶ್ರೀ ಬಿ. ವಿ. ಕಕ್ಕಿಲ್ಲಾಯ ——ಸ್ವಾಮಿ, ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಬೆಂಗಳೂರು ನಗರದಲ್ಲಿ ಅನೇಕ ರೀತಿಯಲ್ಲಿ ಹೊಡೆದಾಟ ಬಡಿದಾಟ ನಡೆಯುತ್ತಿರುವುದನ್ನು ನೋಡಿ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ? ಕೇರಳ ಮತ್ತು ತಮಿಳುನಾಡಿನಿಂದ ಬಂದಿರತಕ್ಕಂತಹ ಎಲ್ಲರನ್ನೂ, ಬೆಂಗಳೂರಿನಿಂದ ಹೊಡಿಸಬೇಕು ಎಂದು ಅವರು ಹೇಳುತ್ತಿದ್ದಾರೆ. ನಿಮ್ಮ ಕೈಯಲ್ಲಿ ಆಗದಿದ್ದರೆ ಎಸೆನ್ಷಿಯಲ್ ಸರ್ವೀಸ್‌ಗಳಾದ ನೀರು, ಎಲೆಕ್ಟ್ರಿಸಿಟಿ ಮತ್ತು ರೇಷನ್ ಇತ್ಯಾದಿಗಳನ್ನೆಲ್ಲಾ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಈ ಅಧಿಕಾರವನ್ನು ಇವರಿಗೆ ಯಾರು ಕೊಟ್ಟರು ? ನಮ್ಮ ಸಂವಿಧಾನಕ್ಕೆ ವಿರುದ್ಧವಾಗಿ ಇಂತಹ ಒಂದು ರಾಜಕೀಯ ಕೇಂದ್ರವು ಈ ರೀತಿಯಲ್ಲಿ ವರ್ತನೆ ಮಾಡುತ್ತಿದ್ದರೂ ಸಹ ಸರ್ಕಾರ ಅದನ್ನು ನೋಡಿಕೊಂಡು ಸುಮ್ಮನೆ ಕೂತಿರುವುದು ಸರಿಯೇ ? ಇಂತಹ ಒಂದು ಗಂಭೀರವಾದಂಥ ಸ್ಥಿತಿಗೆ ನಮ್ಮ ಬೆಂಗಳೂರು ನಗರವನ್ನು ಹಾಗೂ ನಮ್ಮ ದೇಶವನ್ನು ಒಯ್ಯುವಂತಹ ಸ್ಥಿತಿಗೆ ಬಿಟ್ಟಿರಲು ಕಾರಣವೇನು? ಇಂತಹವರ ಮೇಲೆ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ? ಒಂದು ಗುಂಪಿನವರು ಇನ್ನೊಂದು ಗುಂಪಿನವರ ಮೇಲೆ ಈ ಕರಪತ್ರದ ಮೂಲಕ ಈ ರೀತಿ ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿರುವುದು ಸರಿಯೇ ಎಂದು ಕೇಳುತ್ತೇನೆ. ಆದ್ದರಿಂದ ಇಂತಹವರ ಮೇಲೆ ಸರ್ಕಾರದವರು ಈಗಿನ ಕಾನೂನು ವ್ಯಾಪ್ತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಮತ್ತು ನಮಗೆ ಸರ್ಕಾರದಿಂದ ಇದರ ಬಗ್ಗೆ ಸ್ಪಷ್ಟವಾದಂಥ ಆಶ್ವಾಸನೆ ಬೇಕು, ಏನೆಂದರೆ, ಈ ರೀತಿಯಾಗಿ ಯಾವುದೇ ಸಂಘ ಸಂಸ್ಥೆಗಳು ನಮ್ಮ ಜನರಲ್ಲಿ ಒಂದು ರೀತಿಯ ಭಯಾನಕ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಹಾಗೂ ಕಾನೂನನ್ನು ತಮ್ಮ ಕೈಯೊಳಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ ಮತ್ತು ಇಂತಹ ವ್ಯಕ್ತಿಗಳ ಮೇಲೆ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂಬ ಬಗ್ಗೆ ಸರ್ಕಾರದವರು ಉತ್ತರ ಕೊಡಬೇಕು. ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಇರುವುದು ಕಾರ್ಮಿಕರ ಮೇಲೆ ಪ್ರಯೋಗ ಮಾಡುವುದಕ್ಕಾಗಿ ಅಲ್ಲ. ಸರ್ಕಾರದವರೇ ಇದರಲ್ಲಿ ರಾಜಕೀಯ ತರುವುದು ಬೇಡ ಎಂದು ಹೇಳುತ್ತಿರುವಾಗ, ಈ ರೀತಿ ಕರಪತ್ರ ಹೊರಡಿಸಿರುವುದು ರಾಜಕೀಯವಲ್ಲವೇ ? ಇದಕ್ಕೆ ಸರ್ಕಾರದವರು ಏನಾದರು ಅವಕಾಶ ಕೊಟ್ಟರೆ, ನಾಳೆ ದಿವಸ ಕೇರಳಾ ಮತ್ತು ತಮಿಳುನಾಡು ಸರ್ಕಾರದವರು ನಮಗೆ ವಿದ್ಯುಚ್ಛಕ್ತಿ ಕೊಡುವುದಿಲ್ಲ. ಅಷ್ಟೇ ಅಲ್ಲ, ಕೇರಳಾ ಮತ್ತು ತಮಿಳುನಾಡು ವಿಧಾನ ಸಭೆಗಳಲ್ಲಿ ಇದೇ ವಿಚಾರವನ್ನು ಪ್ರಸ್ತಾಪ ಮಾಡಿ, ನಮ್ಮ ರಾಜ್ಯದ ಮೇಲೆ ಯುದ್ಧ ಮಾಡುತ್ತೇವೆಂದು ಸಾರಬಹುದು. ಇದರಿಂದ ನಮ್ಮ ರಾಜ್ಯದ ಮೇಲೆ ಯಾವ ಪರಿಣಾಮ ಬೀರುತ್ತದೆಂಬುದನ್ನು ತಾವು ನೋಡಬೇಕು. ಆದಕಾರಣ ಇದರ ಮೇಲೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರೂ ಸಹ ಇದನ್ನು ಲಘುವಾಗಿ ಪರಿಗಣಿಸಬಾರದೆಂದು ಹೇಳುತ್ತೇನೆ. ಈ ರೀತಿ ಗೊಂದಲ ಮಾಡಿದವರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಆಫೀಸ್ ಮೇಲೆ ದಾಳಿ ಮಾಡಿದಂಥ ಜನರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯ ಮಂತ್ರಿಗಳು ಹೇಳಿದರು. ಅದರಂತೆ ಸರ್ಕಾರದವರು ಈ ಕರಪತ್ರ ಹೊರಡಿಸಿದವರ ಮೇಲೂ ಸಹ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇದರಿಂದ ಮುಂದೆ ಏನು ಪರಿಣಾಮವಾಗುತ್ತದೆಂಬುದನ್ನು ಸರ್ಕಾರದವರೇ ಯೋಚನೆ ಮಾಡಬೇಕು ಇವೊತ್ತು ೪ ಗಂಟೆಗೆ ಮೀಟಿಂಗ್ ಕರೆದಿದ್ದಾರೆ. ಆಲ್ಲಿ ನಾವು ಇದರ ಬಗ್ಗೆಯೂ ಮಾತನಾಡುತ್ತೇವೆ. ಅದಕ್ಕೆ ಮೊದಲು ಇಲ್ಲಿ ಕೂಡ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು. ಏಕೆಂದರೆ, ಇಲ್ಲಿ ಪಾರ್ಲಿಮೆಂಟ್ ಸದಸ್ಯರೊಬ್ಬರ ಹೆಸರನ್ನು ಸಹ ಬೇಳಿದ್ದಾರೆ. ಜೊತೆಗೆ ಕಾರ್ಮಿಕರು ಇ.ಎಸ್.ಐ. ಬೆನಿಫಿಟ್ ಪಡೆಯುವುದನ್ನು ತಡೆಯಬೇಕೆಂದು ಹೇಳಿದ್ದಾರೆ. ಇಂತಹ ಜನರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು? ಎನ್.ಎಸ್.ಯು.ಐ. ಎಂದರೆ ಏನು? ಇಂತಹವರ ಕೈಯಲ್ಲಿ ಆಡಳಿತ ನಡೆಸಲು ಅವಕಾಶ ಕೊಟ್ಟಿದ್ದೀರೇನು? ಇಂಥಾದ್ದಕ್ಕೆಲ್ಲಾ ಅವಕಾಶ ಕೊಡುವುದಿಲ್ಲವೆಂದು

ಸರ್ಕಾರ ಆಶ್ವಾಸನೆ ಕೊಡಬೇಕು. ಏಕೆಂದರೆ, ಕಾರ್ಮಿಕರೇನೂ ಭಿಕ್ಷೆ ಬೇಡಲು ಬಂದಿಲ್ಲ. ಇವರುಗಳು ಕೇಂದ್ರ ಸರ್ಕಾರದ ಉದ್ಯಮಗಳಲ್ಲಿ ಹತ್ತರು ವರ್ಷಗಳಿಂದ ದುಡಿದಿದ್ದಾರೆ. ಈ ದೇಶದ ರಕ್ಷಣೆಗೆ ಬೇಕಾದ ಸಾಮಗ್ರಿಗಳನ್ನು ತಯಾರಿಸಲು ದುಡಿಯುತ್ತಿದ್ದಾರೆ. ಆದಕಾರಣ ಇಂತಹ ಕಾರ್ಮಿಕರಿಗೆ ರಕ್ಷಣೆ ಕೊಡಬೇಕೇ ಹೊರತು, ಕೆಲವೇ ಜನರಿಂದ ಆತಂಕಕಾರಿಯಾದಂಥ ಪ್ರವೃತ್ತಿ ಈ ನಗರದಲ್ಲಿ ಬೆಳೆಯಲು ಅವಕಾಶ ಕೊಡಬಾರದು. ಅವಕಾಶ ಕೊಟ್ಟರೆ, ತಮ್ಮ ಪಕ್ಷದ ಬಲದಿಂದಲೇ ಹಾಗೂ ಸರ್ಕಾರದ ಕುಮ್ಮಕ್ಕಿನಿಂದಲೇ ಇದೆಲ್ಲಾ ನಡೆಯುತ್ತಿದೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆದ ಕಾರಣ ಇದನ್ನೆಲ್ಲಾ ತಡೆಗಟ್ಟುತ್ತೇವೆಂದು ತಾವು ಈ ಕೂಡಲೇ ಆಶ್ವಾಸನೆ ಕೊಡಬೇಕು. ಇಲ್ಲದಿದ್ದರೆ, ತಾವು ಒಂದು ಕಡೆ ಇವರನ್ನು ಎತ್ತಿಕಟ್ಟಿ ಮತ್ತೊಂದು ಕಡೆ ನಮ್ಮ ಮೇಲೆ ಪೋಲೀಸ್ ಸಿಬ್ಬಂದಿಯನ್ನು ಛೂ ಬಿಡುತ್ತಿದ್ದೀರಿ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಹೀಗೆ ಎರಡು ರೀತಿಯಿಂದ ನಮ್ಮ ಮೇಲೆ ಯುದ್ಧ ಮಾಡಲು ಹೊರಟಿದ್ದೀರಾ ಹೇಗೆ ಎಂಬುದನ್ನು ಮತ್ತು ಇದರ ಬಗ್ಗೆ ಸರ್ಕಾರದ ನಿಲುವೇನು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

SHRI MICHAEL B. FERNANDES.—Sir, I too have sent a notice on this matter. I want to bring to your notice that huge posters in Kannada, Tamil and English...

ಅಧ್ಯಕ್ಷರು.—ಈ ವಿಷಯ ಏನಿದೆ, ಇದರ ಬಗ್ಗೆ ನನಗೂ ಸಹ ಸಮಾಧಾನವಿಲ್ಲ; ಆದರೆ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಈ ದಿನ ಮಧ್ಯಾಹ್ನ ನಾಲ್ಕು ಗಂಟೆಗೆ ಇದೇ ವಿಚಾರದಲ್ಲಿ ಸಭೆ ಸೇರುತ್ತಿದ್ದೀರಿ, ಇದರ ಜೊತೆಗೆ ಈ ಕರಪತ್ರ ಎಲ್ಲಿ ಪ್ರಿಂಟಾಗಿದೆ ಎಂಬುದನ್ನು ಇದರಲ್ಲಿ ತಿಳಿಸಿಲ್ಲ. ಆದ್ದರಿಂದ.....

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ತಾವು ನಾನು ಹೇಳುವ ವಿಚಾರವನ್ನು ಸ್ವಲ್ಪ ಕೇಳಿದರೆ, ತಾವು ಏನು ಹೇಳುತ್ತೀರಾ ಅದರದು ಅವಶ್ಯಕತೆ ಬರುವುದಿಲ್ಲ. ಸ್ವಲ್ಪ ಹೇಳುವುದನ್ನು ಕೇಳಿ. Because I am a person involved at the other end of this.

ಅಧ್ಯಕ್ಷರು.—ಆಗಬಹುದು.

SHRI MICHAEL B. FERNANDES.—Sir, The point I was making was that these posters and these handbills are being distributed by people who claim to be the members of the National Stndends Union of India and also by the INTUC. They are found going in cars, and what is very surprising is, that these things are being done with police protection. That is what is worrying us. There are police jeeps escorting these people, and these people very boldly paste up these posters and distribute these handbills. The fact that there is no name of the press was in itself a matter to be taken note of by the Police, and the Police should have arrested these people on the spot. The contents of this are against the spirit of national integration and against the interest of peace and order. Public peace and pubiic order. Now, here is a demand that the tamilians and keralities should be driven out of Karnataka. Now, what would happen tomorrow Thackerey of Bombay can be inspired by this and he may again start driving out all Kanndigas from Bombay. And Delhi can drive out Kannadigas from Delhi, and Madras can drive out all Kannadigas from Madras. This will be an inspiration, and we will have another Assam type of agitation not only in Karnataka against the Tamilians and Keralities, but also in other States, perhaps,

against not only Tamilians and Keralities but also against Kannadigas. Now, here is a front organisation of the ruling party which is allowed to do this by the Police. What is the purpose behind this, Again? It is to break the strike. They tried all other methods. They tried to bring in caste, they tried to bring in religion, and now they are trying to bring in language and provincialism. Is this the low level to which the party in power through its front organisation was going in order to break the strike? Is this the method they were going to adopt. This is a fundamental question which this House must be now seized of. What will be the implications of this? This can spark off as an agitation right from tomorrow. Do you know what they say? They say that is Mrs. Indira Gandhi, the Prime Minister the English poster says 'beloved Prime Minister', well, its allright they can regard her as their beloved Prime Minister. Fine. But then, why do they ask for these devilish things to be done by her? They want Mrs. Indira Gandhi to come and drive out the Tamilians and Keralities from here within a week, and if she does not do it, they say, they will stop water, and electricity, we will stop rations and they will socially boycott them. They don't stop with that. They further say; we will go and lock them up in their houses. This is a fascists tendency that you are allowing these youngsters who have actually no idea of what social justice is. Is this the kind of new method that you are teaching them? You are allowing them to develop this new method. Now there is a lot of tension there. You will again blame us, you will blame the JAF leaders. The provocation is from your side, and now what if workers should retaliate to this what should happen? The workers are all of one mind. The Kannadigas have never complained to us or to anyone, not through the press, nor through any other method, that this is a strike by Tamilians and Keralities against the Kannadigas, against the interests of Karnataka. The Kannadigas are with the strike. Of the six JAF leaders, four are Kannadigas by birth, their mother tongue being Kannada. I am also a Kannadiga. My education was in Kannada–initially-for a number of years. My regional language is Kannada; I am from the South Canara My mother–tongue is Konkani. Only one has Tamil for his mother–tongue, but then he is a domiciled Karnataka man for the last twenty years. Now how can anyone say that this strike is against the Kannadigas by the Tamilians and the Keralites ? Is this the mean way which they want to break the strike with. They will not succeed. Now I ask you, I ask this House, and I ask the Prime Minister of this country who keeps on asking people to stand by national integration, whether all this can be allowed.... Those who are doing it are all her followers. Then it will be like Assam. It will be like in Gujarat. Then dont shed crocodile tears; then dont

start blaming the Opposition when you are instigating your own men. How do we go about now ? Now these fellows have further gone on saying that we had to apologise to them, the JAF leaders had to apologise to them otherwise they would start gheraoing our houses. We would like to see them there. We would like to see these fellows there. Let them come to my house. You want bloodshed in the city ? You want bloodshed in Karnataka? This is not only in the city. I think Mr Kakkilaya was wrong when he said that they were asking the Tamilians and Keralities from Bangalore to go. They want them from the whole of Karnataka to go. Today, the men who are trying to break the strike, who are trying to take a trickle of workers into the factory 20 or 30 workers in each factory, with all the open gates and with all the police bundobust, include also the Keralities, and the Tamilians. The Kannadigas are not going inside. Are you aware of this ?

The men who are trying to break the strike are Tamilians and Keralites. So, Mr. Speaker Sir, you must allow us to raise this matter. I have sent a notice under rule 312, but the Hon. Member Sri B. V. Kakkilaya has sent an adjournment motion. I think this is a very serious matter. I think, even in the Parliment also, they are going to raise this today. We have sent posters and hand bills to Members of Parliament and I am sure and hope they will raise it there today. This is a serious thing and if the Prime Minister wants this sort of a thing to happen in this country, one must question it. Let not the workers who produce defence equipments of this country be made sacrificial goats by all these politicians. We are not injecting politics into this. Now, we see here the charge against the Chief Minister that he is soft peddling with the J.A.F. If any thing, we have our charge against the Chief Minister, that he has not kept up his words to us. and who are these people to say that. I do not know whose politics this is, but there are some references to Sri F. M. Khan, M.P., and the President of the I.N.T.U C. I do not know whether there is politics between him and the Chief Minister; I do not know of whom; I don't want this and we don't care also. It is not our business. This is the dirty politics. We are not concerned about it. We have a strike and the strike is going on; this is the 74th day. After such a number of days, we have spent a lot of time in this House. But, now we see this development after going out of the House yesterday. I was sent for by the I.T.I workers; Kannadigas have confirmed to me. I went to I.T.I. township. They were all very angry. There was one more poster by some admirers or some film fans or something like that. They said that the strike was started by the strike leaders against the kannadigas. This charge

comes on the 74th day. These politicians have the dirty habit of inventing reasons as days go along. Nothing was there all along. Now, they are inventing these reasons on the linguistic angle because the language is an emotional issue. So, this House must decide what sort of youngsters they are, and who inspired them. This House must decide whether these youngsters can adopt these facist methods to start in Karnataka a kind of agitation, of the same dimension as in Assam or in Gujarat and later on this House will rule a day when they would not think this was necessary to discuss and curb these fellows.

ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಕ್ಕಿಲಾಯ ಅವರು ಕಳಿಸಿರತಕ್ಕ ನಿಲುವಳಿ ಸೂಚನೆಯನ್ನು ಬೆಂಬಲಿಸಿ, ಇದಕ್ಕೆ ಸಂಬಂಧಪಟ್ಟ ಎರಡು, ಮೂರು ಪ್ರಾಮುಖ್ಯವಾದ ಆಯಾಮಗಳ ಕಡೆಗೆ ತಮ್ಮ ಗಮನವನ್ನು ನಾನು ಸೆಳೆಯಬೇಕಾಗಿದೆ. ಇದನ್ನು ಯಾರೋ ಹುಚ್ಚರು ಪ್ರಕಟಣೆ ಮಾಡಿದ್ದಾರೆ ಎನ್ನುವುದಾದರೆ ಈ ವಿಧಾನಸಭೆಯಂಥ ಒಂದು ಜಾಗದಲ್ಲಿ ಇದಕ್ಕೆ ಪ್ರಾಮುಖ್ಯತೆ ಕೊಡಬಹುದು ಅಥವಾ ನೋಡಬಹುದು ಎನ್ನುವುದಾದರೆ ಇದಕ್ಕೆ ಪ್ರಾಮುಖ್ಯತೆ ಬಂದಿದೆ. ಆದ್ದರಿಂದ ಈ ಆಯಾಮದ ಕಡೆಗೆ ತಮ್ಮ ಗಮನವನ್ನು ಸೆಳೆಯಬೇಕಾಗಿದೆ. ಅಲ್ಲದೆ ಇದಕ್ಕೆ ಯೋಗ್ಯತೆ ಕೊಡಬೇಕೇ ಬೇಡವೇ ಎನ್ನುವಾಗ ತಾವೇ ಇದರ ಬಗ್ಗೆ ಸಮಾಧಾನವಿಲ್ಲವೆಂದು ಹೇಳಿದಿರಿ.

ಅಧ್ಯಕ್ಷರು.—ಸಭೆಗೂ ಸಮಾಧಾನ ಇರುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಎಲ್ಲರಿಗೂ ಸಮಾಧಾನವಿದೆ ಎಂದು ಹೇಳತಕ್ಕಂಥ ಮೂರ್ಖ ತನಕ್ಕೆ ನಾನು ಕೈಹಾಕುವುದಿಲ್ಲ. ಆದರೆ ಇಂಥ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಅದರ ಬಗ್ಗೆ ಒಂದು ಮುಕ್ತ ಮನಸ್ಸಿನಿಂದ ಚರ್ಚೆ ಮಾಡಲೇಬೇಕು ಎನ್ನುವಂಥ ಹಂತಕ್ಕೆ ಈ ರಾಜ್ಯದಲ್ಲಿ ಬಂದು ಮುಟ್ಟಿದ್ದೇವೆ ಎನ್ನುವುದು ನಾನು ತಮಗೆ ವಿನಂತಿಸಿಕೊಳ್ಳಬೇಕಾದ ವಿಚಾರ. ಇದು ಒಂದೇ ಘಟನೆಯಾಗಿದ್ದಿದ್ದರೆ ಇವತ್ತು ಮಾತ್ರ ಇಲ್ಲಿ ನಡೆಯಿತು ಎಂದು ನಾವು ಅಷ್ಟು ತಲೆ ಬಿಸಿ ಮಾಡಿಕೊಳ್ಳಬೇಕಾದ ಅಗತ್ಯವಿರುತ್ತಾ ಇರಲಿಲ್ಲ. ಇದರಲ್ಲಿ ಎರಡು, ಮೂರು ಆಯಾಮಗಳಿವೆ. ಒಂದನೆಯದು, ಈ ಮುಷ್ಕರವನ್ನು ಯಾವುದಾದರೂ ಒಂದು ರೀತಿಯಲ್ಲಿ ಬಗೆಹರಿಸಿ ಸಮರ್ಪಕವಾಗಿ ಇದನ್ನು ಮುಕ್ತಾಯಗೊಳಿಸಬೇಕು ಎನ್ನುವ ಪ್ರಯತ್ನದಲ್ಲಿ ಇಡೀ ಸದನದಲ್ಲಿ ಸರ್ಕಾರದ ಜೊತೆಗೆ ಸಹಕರಿಸುತ್ತಾ ಇರತಕ್ಕಂಥ ಹೊತ್ತಿನಲ್ಲಿ ಬೇರೆ ಒಂದು ರೀತಿಯಲ್ಲಿ ಕನ್ನಡಿಗರು, ತಮಿಳರು ಕೇರಳದವರು ಎಂಬ ಬೇರೆ ಬೇರೆ ಆಯಾಮವನ್ನು ಅಲ್ಲಿ ತೂರಿ, ಆ ದೃಷ್ಟಿಯಿಂದ ವಿಭಜನೆ ಮಾಡೋಣ ಎನ್ನತಕ್ಕ ಪ್ರಯತ್ನ ಅಸಾಧುವಾದುದು. ಆ ರೀತಿ ಯಾರು ವರ್ಣನೆ ಮಾಡಿದರೂ ಕೂಡ ಈ ಮುಷ್ಕರವನ್ನು ಏನಾದರೂ ಮಾಡಿ ಬಗೆಹರಿಸಬೇಕು ಎನ್ನತಕ್ಕ ಪ್ರಯತ್ನದಲ್ಲಿದ್ದೇವೆ. ಆ ಪ್ರಯತ್ನಕ್ಕೆ ಖಂಡಿತವಾಗಿಯೂ ಇದು ಮಾರಕವಾದಂಥಾದ್ದು. ಎರಡನೆಯದು, ಇಲ್ಲಿರತಕ್ಕ ಕೇರಳದವರನ್ನು, ತಮಿಳುನಾಡಿನವರನ್ನು ಇನ್ನೊಂದು ಊರಿನಿಂದ ಬಂದವರಲ್ಲ ಎಂದು ಒಂದಲ್ಲ ಒಂದು ಕಾರಣದಿಂದ ಹೊರಗೆ ಓಡಿಸುತ್ತೇವೆ ಎನ್ನುವಂಥಾದ್ದು. ಈ ರೀತಿ ನಾವು ಇಲ್ಲಿ ಮಾಡಿದರೆ ಬೇರೆ ರಾಜ್ಯಗಳಲ್ಲಿರತಕ್ಕ ನಮ್ಮ ಜನಗಳ ಗತಿಯೇನು ?

ಅಧ್ಯಕ್ಷರು.—ಬೊಂಬಾಯಿಯಲ್ಲಿ ಅನುಭವಿಸಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಯಾವುದೇ ರಾಜ್ಯದಿಂದ ಜನಗಳು ಬಂದಿರಲಿ, ಅವರು ನಮ್ಮ ಕರ್ನಾಟಕ ರಾಜ್ಯದಲ್ಲಿ ಬದುಕುತ್ತಿದ್ದಾರೆ ಎಂದು ತಿಳಿದುಕೊಂಡು ಬದುಕಬೇಕಾದುದು ಪ್ರತಿಯೊಬ್ಬರ ಕರ್ತವ್ಯ. ಆ ಒಂದು ದೃಷ್ಟಿಕೋನದಿಂದ ಹುಟ್ಟಿರತಕ್ಕ ವಿಚಾರವಲ್ಲ ಇದು. ಅವರೂ ಕರ್ನಾಟಕದಲ್ಲಿದ್ದಾರೆ. ಕರ್ನಾಟಕ ಭಾರತದ ಒಂದು ಅವಿಭಾಜ್ಯ ಅಂಗ ಎಂದು ನಾವು ತಿಳಿದುಕೊಳ್ಳಬೇಕು. ಆ ಆಯಾಮದ ಸುದ್ದಿಗೆ ನಾನು ಹೋಗುವುದಿಲ್ಲ. ಏಕೆಂದರೆ ಅದು ಸ್ವಯಂವೇದ್ಯವಾದ ವಿಚಾರ. ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರವೆಂದರೆ, ಈ ರಾಜ್ಯದಲ್ಲಿ ಸರ್ಕಾರವನ್ನು ಯಾರು ನಡೆಸುತ್ತಿದ್ದಾರೆ, ನಾವು ದೃಢವಾಗಿ ವಿಶ್ವಾಸ ಹೊಂದಿರತಕ್ಕಂಥಾದ್ದು ಈ ಮಂತ್ರಿ ಮಂಡಲ ಸರ್ಕಾರ ನಡೆಸುತ್ತಾ ಇದೆ. ಇದೇ ಸರ್ಕಾರ ನಡೆಸುತ್ತಾ ಇದೆ ಎಂದು ನಾವು ತಿಳಿದುಕೊಂಡಿದ್ದೇವೆ. ನೀವೂ

ಹಾಗೆಯೇ ಸರ್ಕಾರದವರು ತಿಳಿದುಕೊಂಡಿದ್ದೀರಿ ಎಂದು ನಾನು ವಿಶ್ವಾಸ ಪಡುತ್ತೇನೆ. ನೀವು ಯಾವುದೋ ಒಂದು ಮಟ್ಟದಲ್ಲಿ ಮಾತನಾಡಬಹುದು. ಒಂದು ಸಂದರ್ಭದಲ್ಲಿ ಯಾವುದೋ ಒಂದು ಜನ ಇಡೀ ಜನ ಸಮೂಹದ ಹಿತಕ್ಕಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಲೋಕಾಭಿರಾಮವಾಗಿ ಮುಖ್ಯ ಮಂತ್ರಿಗಳು, ಮಂತ್ರಿಗಳು ಹೇಳಬಹುದು. ಇದೇ ರೀತಿ ಮಾಡಿದರೆ ಜನ ನೋಡಿಕೊಳ್ಳುತ್ತಾರೆ ಎಂದು ನೀವು ಹೇಳಬಹುದು. ಆ ಮಾತು ತಪ್ಪು ಎಂದು ನಾನು ಹೇಳುವುದಿಲ್ಲ. ಆ ಮಾತನ್ನು ಪದೇ ಪದೇ ಮುಖ್ಯ ಮಂತ್ರಿಗಳು ಹಾಗೂ ಇನ್ನಿತರ ಸರ್ಕಾರದ ಜವಾಬ್ದಾರಿಯನ್ನು ಹೊತ್ತಂಥ ಜನ ಗಳು ಆಡಿದಾಗ ಅವರ ಪಕ್ಷದ ಯಾವುದೋ ಒಂದು ವಿಭಾಗ ಜನ ನೋಡಿಕೊಳ್ಳುತ್ತಾರೆ ಎಂದು ಹೇಳಿದಾಗ ಅವರು ಆ ಜನ ನಾವೇ, ಆದುದರಿಂದ ನಾವು ನೋಡಿಕೊಳ್ಳಬೇಕು ಎಂಬ ಸೂಚನೆಯನ್ನು ಪಡೆದು ಕೊಂಡು ತಕ್ಷಣವೇ ಕಾರ್ಯಪ್ರವೃತ್ತರಾಗುತ್ತಾ ಇರುವುದನ್ನು ನೋಡುತ್ತಿದ್ದೇವೆ. ಇವರು ಕಾರ್ಯ ಪ್ರವೃತ್ತರಾದರೆ ಇದನ್ನು ನೋಡಿಕೊಂಡು ಜೋಡಿಸಿಕೊಂಡು, ಯಾರು ನಮ್ಮ ಕಾನೂನು ಶಿಸ್ತನ್ನು ಪಾಲನೆ ಮಾಡತಕ್ಕ ಪೋಲೀಸರು ಇದ್ದಾರೆ ಅವರು ಕೈಕಟ್ಟಿಕೊಂಡು ಕುಳಿತುಕೊಂಡಿರುವುದು ಮತ್ತು ಇವರ ಹಿಂದುಗಡೆ ಮತ್ತು ಮುಂದುಗಡೆ ರಕ್ಷಣೆ ಕೊಟ್ಟುಕೊಂಡು ಹೋಗುತ್ತಾ ಇರುವುದನ್ನು ಎಷ್ಟು ದಿವಸಗಳವರೆಗೆ ನೋಡಿಕೊಂಡು ಕುಳಿತುಕೊಳ್ಳುವುದು. ನಿಮ್ಮ ಪಕ್ಷದ ವಿಂಗ್ ಇಲ್ಲಿರತಕ್ಕ ಜನ ಅವರು ಏನು ಮಾಡಿದರೂ ಅದೇ ಕ್ರಮ, ಆದನ್ನು ಯಾರೂ ವಿರೋಧಿಸಬಾರದು. ನಾವು ಇಲ್ಲಿ ಎರಡು ರೀತಿ ಯಲ್ಲಿ ಕೆಲಸ ಮಾಡಬೇಕು. ಒಂದವಿಯದು, ಈ ಸಭೆಯಲ್ಲಿ ನಿಮ್ಮನ್ನು ವಿರೋಧಿಸುವುದಕ್ಕೆ ತಯಾ ರಾಗಬೇಕು. ಎರಡನೆಯದು, ಯೋಗ್ಯತೆ ಇಲ್ಲವೆಂದು ಹೇಳಿ, ರಾಜೀನಾಮೆ ಕೊಟ್ಟು ಹೋಗ ಬೇಕಾದ್ದು. ನಮ್ಮಲ್ಲಿ ರಾಜಕೀಯ ಪಕ್ಷಗಳು ಬೇರೆ ಬೇರೆ ಇರಬಹುದು, ಪಕ್ಷಗಳನ್ನು ಒಡೆಯಬಹುದು, ಪಕ್ಷಗಳು ಒಂದಾಗಬಹುದು, ಆದರೆ ಈ ಒಂದು ರಾಜಕಾರಣ, ಒಂದು ಮಟ್ಟದಲ್ಲಿ ಈ ಸಭೆಯಲ್ಲಿ ನಡೆಯಬೇಕು. ಪ್ರತಿಯೊಂದು ಪಕ್ಷವೂ ತನ್ನ ಅಂಗ ಸಂಸ್ಥೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಹೋದರೆ ಅಂತರ್ಯುದ್ಧ ನಡೆಸುತ್ತಾರೆ. ಈ ಅಂತರ್ಯುದ್ಧದ ಮೇಲೆ ದೇಶದ ಸಮಸ್ಯೆ ಯನ್ನು ಬಗೆಹರಿಸುತ್ತೇವೆನ್ನುವುದು ಸರ್ಕಾರದ ಉದ್ದೇಶವಿದ್ದರೆ ಇನ್ನೊಂದು ನಿಲುವನ್ನು ತಾಳುವುದಕ್ಕೆ ಶಕ್ಯವಾಗುತ್ತದೆ. ದಯವಿಟ್ಟು ಅವರು ಈ ರೀತಿಯ ಒಂದು ಅಭಿಪ್ರಾಯದಲ್ಲಿ ಇಲ್ಲ ಎನ್ನುವುದಾದರೆ ಈ ರೀತಿಯ ಚಟುವಟಿಕೆಗಳನ್ನು ನಡೆಸತಕ್ಕಂಥಾವರು ಯಾರೇ ಆಗಲಿ, ಈ ಚಟುವಟಿಕೆಗಳನ್ನು ಯಾವ ಪಕ್ಷ ನಡೆಸುತ್ತಿದೆ, ಅಂಗ ಸಂಸ್ಥೆಗಳು ಎಂದು ಹೇಳಿಕೊಳ್ಳತಕ್ಕ ಜನ ಯಾರು ಎನ್ನುವುದನ್ನು ಜವಾಬ್ದಾರಿ ಸರ್ಕಾರ ಸಿದ್ಧಮಾಡಿಲ್ಲ. ಪ್ರೂಫ್ ಮಾಡಿ ತೋರಿಸಿದರೆ ನಮಗೆ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಆದರೆ ಈ ಎಸ್ ಎಸ್. ಯು. ಐ. ಯಾರು, ಯೂತ್ ಕಾಂಗ್ರೆಸ್ ಯಾರು ಎನ್ನುವುದು ಗೊತ್ತಿಲ್ಲ. ಇವೆಲ್ಲಾ ದಿಢೀರನೆ ಪ್ರಾಪ್ತವಾಗುತ್ತವೆ. ಒಂದು ಪಕ್ಷ ಅಧಿಕಾರಕ್ಕೆ ಬಂದೊಡನೆ ಈ ಎನ್.ಎಸ್.ಯು.ಐ. ಯೂತ್ ಕಾಂಗ್ರೆಸ್ ಹುಟ್ಟಿಕೊಳ್ಳುತ್ತದೆ. ಇನ್ನೊಂದು ಆಗುತ್ತದೆ. ಇದರಲ್ಲಿ ಒಬ್ಬೊಬ್ಬರು ಒಂದೊಂದು ಸ್ಪ್ಯಾಂಡ್ ತೆಗೆದುಕೊಳ್ಳುವುದನ್ನು ನೋಡಿದ್ದೇವೆ. ಅದರ ಬಗ್ಗೆ ಉಪದೇಶ ಕೊಡ ಬೇಕಾದ ಅಗತ್ಯವಿಲ್ಲ. ಸರ್ಕಾರ ನಡೆಸುವ ಪಕ್ಷಗಳ ಹತೋಟಿ ಇದ್ದಿದ್ದರೆ ನಾನು ಮಾತನಾಡುತ್ತಾ ಇರಲಿಲ್ಲ. ಕೆಲವು ಅಂಗ ಸಂಸ್ಥೆಗಳು ನಿಮ್ಮ ಹತೋಟಿ ಇಲ್ಲದೆ ಕೆಲಸ ಮಾಡುತ್ತಿವೆ. ನೀವು ಹತೋಟಿ ಮಾಡತಕ್ಕ ಇನ್ನೊಂದು ಜವಾಬ್ದಾರಿ ಏನೆಂದರೆ, ಯಾರೇ ಆಗಲಿ ಅಕೃತ್ಯದಲ್ಲಿ ತೊಡಗಿದ್ದರೆ, ಮತ್ತು ಬೇನಾಮಿಯಾಗಿ ಅಕೃತ್ಯಗಳಲ್ಲಿ ತೊಡಗಿದ್ದರೆ ಅವರನ್ನು ಸದೆಬಡಿಯಬೇಕು. ಅವರ ಮಗ್ಗಲು ಮುರಿಯ ಬೇಕು.

ಆಗ ನಿಮಗೆ ನಿಮ್ಮ ಪಕ್ಷದವರನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ ನಮ್ಮ ದೇಶವನ್ನು ಸುವ್ಯವಸ್ಥಿತವಾದ ಸ್ಥಿತಿಯಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇದರ ಬಗ್ಗೆ ತಾವು ಒಂದು ಸಾರಿ ನಿಲುವಳಿ ಸೂಚನೆಯಾಗಿ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ತಮಗೆ ಅಭಿಪ್ರಾಯವಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಇದರ ಬಗ್ಗೆ ಮುಕ್ತವಾದ ಚರ್ಚೆಯನ್ನು ನಡೆಸಿ ಸರ್ಕಾರದ ನಿಲುವು ಏನಿದೆ ಎಂಬು ದನ್ನು ವ್ಯಕ್ತಪಡಿಸಿದರೆ, ಆಗ ನಾವು ಸರ್ಕಾರ ನಡೆಸುತ್ತಿರುವ ಪಕ್ಷದಲ್ಲಿರುವ ವಿಂಗ್‌ಸಲ್ಲದ್ದೇವೆಂದು ತಿಳಿದುಕೊಂಡು ಏನು ಈ ರೀತಿಯಾಗಿ ಕೆಲವರು ನಡೆದುಕೊಳ್ಳುತ್ತಿದ್ದಾರೆ ಅವರಿಗೂ ಮತ್ತು ಇದೆಲ್ಲಕ್ಕಿಂತ ಹೆಚ್ಚಾಗಿ ಪೋಲೀಸ್ ಇಲಾಖೆಯವರಿಗೂ ಗೊತ್ತಾಗಬೇಕಾದ್ದು ಬಹಳ ಅತ್ಯಗತ್ಯವಿದೆ, ಆದುದರಿಂದ ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

† SRI C. M. ARMUGHAM (K.G.F).—Mr. Speaker Sir, I do not have any proof to say that the person whose name appears on the Pamphlet is, the same person who printed this pamphlet. It is also not being mentioned in which Press it is printed, nevertheless this pamphlet has been circulated throughout the Bangalore. Now I do not wish to suggest that the person who printed this pamphlet should be put behind bars. I would only say, if the person who printed this pamphlet belongs to the party in power or any party to which he associates himself, accepts him, then he must be removed from that organisation. The Congress (I) is a national party. Such an act brings discredit to the Congress (I). It does not insist that people of a particular State should remain in that particular State only since the Constitution of India gives right to any person to live any where in the Country. A person from Kashmir can come to Bangalore and stay here. In fact, many people from Kashmir have got their houses in Bangalore. Similarly, many of the Bangaloreans have got houses at various places in the country. Therefore the contents of the law bills go against the party practice. We are those people who speak different languages. Does this apply to Telugu speaking people? If that is so, then 64% of the Telugu speaking people are residing in Kolar District. Has he got any right to say them to go out of the Karnataka State since their mothertongue is Telugu? Can we ask our Muslim friends in Karnataka to get out from the Karnataka State because their mother-tongue is not Kannada? Can we say that English speaking people should not stay in Karnataka? It is an accepted fact that Hindi language has dominated the country since independence. But, can we ask all the Hindi speaking people to go out from Karnataka and stay at Delhi? We cannot. It is stated in the pamphlet in these words:

> "We demand your Hon'ble self to send Tamilians and Keralites away from Karnataka....."

Sir, is it feasible to demand the resignation of Sri C. M. Stephen who is elected from the Gulbarga constituency and who is one of the Central Ministers of the ruling party? Do they suggest that Sri Stephen should come out of the Parliament and stay in Kerala? It is all contradictory to the provisions of our Constitution. I will just read Article 19 of the Constitution of India which says:

> "All citizens shall have the right.—
>
> (a) to freedom of speech and expression;
>
> (b) to assemble peaceably and without arms;
>
> (c) to form associations or unions;
>
> (d) to move freely throught the territory of India;

Karnataka means what? It is a land of people. I am a citizen of the Karnataka irrespective of the language I speak. Article 19, further reads :

"(g) to practise any profession, or to carry on any occupation, trade or business."

With this brute majority of the Congress (I) ruling party, excepting West Bengal, Tamil Nadu and Kerala, they can amend the constitution stating that the people who speak in Kannada must only stay in Karnataka State. All the Hindi speaking people must compulsorily stay in Delhi only and then naturally, Sri Veerendra Patil should be sent out from Delhi since his mothertongue is not Hindi. Until the Constitution is amended, it is wrong to say like this. How can Tamilians and Keralites conduct the strike against the interests of Karnataka? If the person who printed this pamphlet is found to be belonging to the ruling party, they must remove him from the organisation. He is unnecessarily trying to create a communal clash. Even after 30 years, what is the position regarding the reservation to the Scheduled Castes and Scheduled Tribes? What happened in Gujarat? In Tamil Nadu, they have formed an Association of Anti-reservation. It has appeared in Newspapers that Sri Acharya Kriplani expressed his opinion against the reservation for Scheduled Castes and Scheduled Tribes. It reveals the inner depth of affection towards the Scheduled Castes and Scheduled Tribes. We must remember that we are all Indians first. He has threatened that their houses will be locked, water/lights/ration will be stopped and social boycott if these Tamilians and Keralites are not sent away from Karnataka within one week.

ಶ್ರೀ ಎಂ. ಮಳ್ಳೂರು ಆನಂದರಾವ್.—ಸ್ವಾಮಿ, ಅಧ್ಯಕ್ಷರೇ, ಯಾರೋ ಹೊರಗಡೆ ಪಾಂಪ್ಲೆಟನ್ನು ಪ್ರಿಂಟ್ ಮಾಡಿದ್ದಾರೆ, ಅದಕ್ಕೆ ಇಲ್ಲಿ ನಾನ್ ವಿತೌಧ ಪಕ್ಷದ ಸದಸ್ಯರುಗಳು.....

ಅಧ್ಯಕ್ಷರು.—ನಾನು ಆಗಲೇ ಹೇಳಿದೆ. The hon. Members are very much agitated about the matter that is printed in the pamphlet.

ಶ್ರೀ ಎಂ. ಮಳ್ಳೂರು ಆನಂದರಾವ್.—ನನ್ನ ಮಿತ್ರರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಹೊರಗಡೆ ಯಾರೋ ಪಾಂಪ್ಲೆಟನ್ನು ಪ್ರಿಂಟ್ ಮಾಡಿದ್ದಾರೆ. ಅದಕ್ಕೆ ಯಾರೋ ಸಹಿ ಹಾಕಿದ್ದಾರೆ. ಅದರ ಬಗ್ಗೆ ನಾವು ಇಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ಚರ್ಚೆಗೆ ತಂದು ಚರ್ಚೆ ಮಾಡಿದರೆ ಅದಕ್ಕೆ ಇನ್ನೂ ಹೆಚ್ಚಿನ ಇಂಪಾರ್ಟೆನ್ಸ್ ಕೊಟ್ಟು ಹಾಗಾಗಲಿಲ್ಲವೇ ?

(ಗೊಂದಲ)

ಶ್ರೀ ಬಿ. ಮೈಕೇಲ್ ಫರ್ನಾಂಡೀಸ್.—ಏತಕ್ಕೆ ನೀವು ಇಪತ್ತು ಈ ತರಹ ಮಾತನಾಡುತ್ತಿದ್ದಿರಲ್ಲಾ

(ಗೊಂದಲ)

ಶ್ರೀ ಎಂ. ಮಳ್ಳೂರು ಆನಂದರಾವ್.—ಮಾನ್ಯ ಶ್ರೀ ಆರ್ಮುಗಂರವರು ಈಲ್ಲಿ ಆಗಷ್ಟಕ್ಕೆ ಮಾತನಾಡುತ್ತಿದ್ದೇನೆ. ಯಾರೋ ಹೊರಗಡೆಯವರು ಸಹಿ ಹಾಕಿ ಪಾಂಪ್ಲೆಟನ್ನು ಪ್ರಿಂಟ್ ಮಾಡಿದುದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದರಿಂದ ಅನಾವಶ್ಯಕವಾಗಿ ಅದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಹಾಗಾಗುವುದಿಲ್ಲವೇ ?

ಶ್ರೀ ಬಿ. ಮೈಕಲ್ ಫರ್ನಾಂಡೀಸ್.— ಪೋಲೀಸಿನವರ ರಕ್ಷಣೆಯಲ್ಲಿ ಅವರು ಅದನ್ನು ಡಿಸ್ಟ್ರಿಬ್ಯೂಟ್ ಮಾಡುತ್ತಿದ್ದಾರೆ. ಹೊರಗಡೆ ಹೋಗಿ ನೋಡಿ ಗೊತ್ತಾಗುತ್ತದೆ.

ಶ್ರೀ ಎಂ. ಮಳ್ಳೂರು ಆನಂದರಾವ್.—ನಾನು ಹೇಳಿದ ವಿಷಯ ನಿಮಗೆ ಅರ್ಥವಾಗಲಿಲ್ಲ.

ಶ್ರೀ ಬಿ. ಮೈಕೇಲ್ ಫರ್ನಾಂಡೀಸ್.—ನಾವು ಆವಾಗಿನಿಂದ ಮಾತನಾಡುತ್ತಿದ್ದೇವೆ, ನೀವು ಈಗ ಬಂದು ಮಾತನಾಡುತ್ತಿದ್ದೀರಿ. ವಿಷಯ ಏನೆಂಬುದನ್ನು ತಿಳಿದುಕೊಳ್ಳದೇ ಮಾತನಾಡುತ್ತಿದ್ದೀರಿ. ಇದು ಏತಕ್ಕೆ ನೀವು ಹೀಗೆ ಮಾತನಾಡುತ್ತಿದ್ದೀರಿ ?

ಶ್ರೀ ಎಂ. ಮಳ್ಳೂರು ಆನಂದರಾವ್.—ನಾನು ನಿಮಗಿಂತ ಹೆಚ್ಚಾಗಿ ಗಂಟಲು ಏರಿಸಿ ಮಾತನಾಡಬಲ್ಲೆ ಸುಮ್ಮನೆ ಅರ್ಥಮಾಡಿಕೊಳ್ಳದೆ ಮಾತನಾಡುತ್ತಿಲ್ಲ.

ಅಧ್ಯಕ್ಷರು.—ದಯಮಾಡಿ ಕುಳಿತುಕೊಳ್ಳಿ. ಈ ವಿಷಯವನ್ನು ಪ್ರಾರಂಭಿಸಿದಾಗ ತಾವು ಇದ್ದರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಕಕ್ಕಿಲಾಯ ಅವರು ವಿಷಯವನ್ನು ಪ್ರಾರಂಭಿಸಿದಾಗಲೇ ಹೇಳಿದೆ, ಇದರಲ್ಲಿ ಪ್ರಿಂಟಿಂಗ್ ಪ್ರೆಸ್ಸಿನ ಹೆಸರನ್ನು ಮುದ್ರಿಸಿಲ್ಲ ಎಂದು, ಅವರು ಅದನ್ನು ಒಪ್ಪಿಕೊಂಡರು. ಇದಕ್ಕೆಲ್ಲ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಈ ಸಂದರ್ಭದಲ್ಲಿ, ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದರಿಂದ ಅದಕ್ಕೆ ಸದನದ ಸಮ್ಮತಿ ಇದೆ ಎಂಬ ಅಭಿಪ್ರಾಯದಿಂದ ಕೆಲವು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದೆಯೇ ವಿನಹ ಅದರ ಬಗ್ಗೆ ಚರ್ಚೆಯೂ ಪ್ರಾರಂಭವಾಗಿಲ್ಲ ಮತ್ತು ಅದಕ್ಕೆ ಅವಕಾಶವನ್ನೂ ಕೊಟ್ಟಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ವಿಷಯ ಬಹಳ ಗಂಭೀರವಾಗಿದೆ. ಈ ವಿಚಾರ ಏನು ಇದೆ ಎಂಬುದನ್ನು ನಾನು ಹೇಳುತ್ತೇನೆ. ಆದರೆ ಇದರ ಬಗ್ಗೆ ಹೆಚ್ಚು ಮಾತನಾಡುವುದರಿಂದ ವಿಚಾರಕ್ಕೆ ಹೆಚ್ಚು ಪ್ರಚೋದನೆ ಕೊಟ್ಟಂತಾಗುತ್ತದೆ. This is a sensitive issue. As far as possible, let us be serious about the issue, so that the very debate may not give any room for the issue to be prolonged.....

ಶ್ರೀ ಜೆ. ಹೆಚ್. ಪಟೇಲ್.—ಅದರ ಗಂಭೀರತೆ ತಮಗೆ ಅರ್ಥವಾಗಿದ್ದರೆ, ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆಂದರೆ ಸಾಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಗಂಭೀರವಾದ ವಿಚಾರ ಎಂಬುದನ್ನು ನಾನು ಆಗಲೇ ಹೇಳಿದ್ದೇನೆ. ಈ ವಿಚಾರದ ಬಗ್ಗೆ ಚರ್ಚೆಯಾಗುವಾಗ ಅದರ ಪರಿಣಾಮ, ಸಮಾಜದ ಮೇಲೆ ಮತ್ತು ದೇಶದ ಮೇಲೆ ಏನು ಆಗುತ್ತದೆ ಎಂಬುದನ್ನು ಸಂಪೂರ್ಣವಾಗಿ ಮನಗಂಡೇ ಈ ವಿಚಾರವನ್ನು ಚರ್ಚಿಸಿದರೆ ಒಳ್ಳೆಯದು. ಆದ್ದರಿಂದ ಇದನ್ನು ಅಷ್ಟಕ್ಕೇ ಸೀಮಿತಗೊಳಿಸಬೇಕು. ಇದರಿಂದ ಹೆಚ್ಚು ಪ್ರಚೋದನೆ ಸಿಗಬಾರದು. ಪಾಂಪ್ಲೆಟ್‌ಗಳನ್ನು ಹಂಚುವುದರಿಂದ ಯಾವರೀತಿ ಪ್ರಚೋದನೆ ಉಂಟಾಗಲಿಕ್ಕೆ ಸಾಧ್ಯವಿದೆ ಆ ರೀತಿ ಪ್ರಚೋದನೆ ನಮ್ಮ ಚರ್ಚೆಯಿಂದ ಆಗಬಾರದು. ಆದ್ದರಿಂದ, ವಿಷಯವನ್ನು ಕಾದಿಟ್ಟು ಕೊಂಡು ಚರ್ಚೆ ಮಾಡುವುದು ಒಳ್ಳೆಯದು.

SRI C. M. ARMUGHAM.—This is a serious matter which spoils the fair name of the Government, the Prime Minister and the Chief Minister. You must kindly take note of this It has been further said in the pamphlet as follows :

> "We demand your Hon'ble self to send Tamilians and Keralites away from Karnataka as the heritage of our beloved Karnataka is at stake, within one week, failing which the NSUI will stop water/lights/ration and social boycott of these anti-social elements and lock them up in their respective colonies at the cost of our lives".

They have said that these Tamilians and Keralites have got separate colonies. If they have got separate colonies, you must take

action against the management. There cannot be separate colonies for Tamilians, Keralites etc., Allotments will be made by the managements and it will be made to all, irrespective of Tamilians, Keralites or whoever they are. You take for example the HAL colony. I do not know in those days when Sri Krishna Menon was the Minister, whether he constructed separate colonies for Kerala people. Can we say that they will close the doors for others ? Whether they are Tamilians, Keralites or Kannadigas, they are all citizens of India. I this pamphlet, they have called these people as 'anti social elements'. It brings down the prestige of Congress-I, the prestige of the Central Government and the entire State. The Chief Minister was good enough to convey a meeting of the Opposition and was willing to form a Committee to meet the Prime Minister. He is trying his best to solve these workers' problem. Is it wrong on his part ? Can they threaten him that they will take action ? I only appeal that such elements should be booked immediately and stern action should be taken against them according to the National Security Act so that the citizens are protected. It is not difficult for the police to find out in which press this pamphlet was printed. If the police are not able to find out, then it is no good of having the police force in the State. You have got army of policemen, additional I.G P. unnecessarily. Please direct them to get the information and action should be initiated immediately against those who have circulated such pamphlets.

MR. SPEAKER.—The matter has been discussed sufficiently. None of us are happy about the contents of the pamphlets. Let us hear the Government. ನಿಮ್ಮ ನಾಯಕರು ಎಲ್ಲ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಪಂಪಾಪತಿಯವರೇ ; ಹೇಗೂ ತಾವು ಸಂಜೆ ೪ ಗಂಟೆಗೆ ಮುಖ್ಯ ಮಂತ್ರಿಗಳು ಕರೆದಿರುವ ಸಭೆಯಲ್ಲಿ ಸೇರಲಿದ್ದೀರಿ. ಆಗ ನಿಮಗೆ ವಿಚಾರ ಸ್ಪಷ್ಟವಾಗುತ್ತದೆ.

SRI A. LAKSHMISAGAR (Chickpet).—Sir, I have specific reason to seek your permission to say a few words about this matter. Firstly I represent the city constituency and secondly I am permanently residing in the city. I am not going to repeat anything in the matter. This is not a matter which should be looked in a legalistic manner. If a pamphlet of this type had appeared and distributed to the public in a different context, certainly nobody would have taken note of it.

MR. SPEAKER.—Even then, that would be a serious thing.

SRI A. LAKSHMISAGAR.—It assumed importance in the context of discussions that took place on the Adjournment Motion of which we gave notice sometime ago. During the discussions several matters were mentioned and one of the matters to which I may specifically refer is that the Chief Minister appears to have lost initiative in solving the workers' problem. In the context of the workers' strike going on

continuously in Bangalore since 70 days or more, this pamphlet assumes importance. As I said already, it is not a matter to be looked into in a legalistic manner. In the context the pamphlet has appeared it assumes importance ; it is a very serious matter and this will create grave consequences. Action is not taken against these anti-social elements responsible, for this pamphlet and I allege that the Police have been soft-peddling with these anti-social elements. I have been a victim of emergency and I know how the police work under such circumstances and Sri Patel knows and even Sri Fernandes knows about the police. It is not impossible to get hold of these rowdy people. They are acting under the very nose of the police. I say this with a sense of responsibility. Therefore, there is something fishy. Government have not taken action to get on to these anti social elements. This submission, I am making again with a sense of responsibility.

2-30 P.M.

MR. SPEAKER.—At 4-00 P.M. you have got a meeting with the Chief Minister. You can discuss these things with the Chief Minister. But suddenly coming to this conclusion.....

SRI A. LAKSHMISAGAR.—There are hundreds of matters we can discuss with the Chief Minister.

MR. SPEAKER.—Heaven is not going to fall. You are meeting him at 4-00 P.M.

SRI A. LAKSHMISAGAR.—There are hundreds of matters. But we would have failed in our duty if we had not brought this matter to the notice of the Hon. Speaker and also to the notice of this House. Let the people know. We are not trying, let me assure Sri Moily, to foment trouble. But we are trying to help you if you are prepared to take action against these goonda elements, hoodlums who are going about, having all the protection from the administration side. This is an allegation I am making. This would not have happened if these people are going without all protection. No one can think of this. They claim to be the Members of a Front Organisation. I know their names. I know the name of this chap quite well for some other reason. It is not as if he has a spurious pamphlet. I can say this much also. All such pamphlets do not bear the name of the Printing Press. Therefore sir, it is a very serious matter. We are going to land up in a very serious situation. Peace will not be maintained if the Government is not going to take sternest action against them. The first thing that they can do is to put them all in prison under National Security

Act. This is my submission, if they are really interested in maintaining peace and harmony among several communities and ethnic groups in the City.

ಶ್ರೀ ಜೆ. ಹೆಚ್. ಪಟೇಲ್ (ಚನ್ನಗಿರಿ).— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮುಂಚೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಈಗಾಗಲೇ ಹಲವಾರು ಸದಸ್ಯರು ಮಾತನಾಡಿದ್ದಾರೆ. ಒಂದು ವಿಷಯ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಶ್ರೀ ನಾಗಭೂಷಣ ಆರಾಧ್ಯ ಎಂಬುವರು ಕಾಂಗ್ರೆಸ್ ಸ್ಟೂಡೆಂಟ್ ವಿಂಗ್‌ನ ಮುಖಂಡರು ಎಂದು ಬರೆದುಕೊಂಡಿದ್ದಾರೆ. ಅವರನ್ನು ಈ ಮೊದಲೇ ದಸ್ತಗಿರಿ ಮಾಡಿದ್ದೀರಾ ? ಮಾಡದೇ ಇದ್ದರೆ ಏತಕ್ಕೆ ಮಾಡಿಲ್ಲ ? ಇದೇ ನಾಗಭೂಷಣ ಆರಾಧ್ಯ ಎಂಬುವರು ಕೆಲವು ದಿನಗಳ ಹಿಂದೆ ಡೆಕ್ಕನ್ ಹೆರಾಲ್ಡ್ ಆಫೀಸಿಗೆ ಹೋಗಿ ಇದೇ ಅಂಶಗಳಿರತಕ್ಕ ವಿಷಯವನ್ನು ಕೊಟ್ಟು ಇದನ್ನು ಪ್ರಿಂಟ್ ಮಾಡಿ ಎಂದು ಕೇಳಿದಾಗ ಪತ್ರಿಕೆಯವರು ಇಂಥ ವೆಂಟೀರಿಯಲ್‌ಗಳನ್ನು ಪ್ರಕಟಿಸುವುದಕ್ಕಾಗುವುದಿಲ್ಲ ಎಂದು ನಿರಾಕರಿಸಿದಾಗ ಇವರು ಮತ್ತು ಇವರ ಸ್ನೇಹಿತರು ಅಂದರೆ ಗೂಂಡಾಗಳು... ಈ ಕಾಂಗ್ರೆಸ್ (ಐ)ನಲ್ಲಿ ಒಳ್ಳೆಯವರು ಎಷ್ಟು ಜನ ಇದ್ದಾರೋ ನನಗಂತೂ ಗೊತ್ತಿಲ್ಲ. ನಾಗಭೂಷಣ ಆರಾಧ್ಯ ಅವರ ಜೊತೆಯಲ್ಲಿ ಅವರ ಸ್ನೇಹಿತರೂ ಕೂಡ ಹೋಗಿದ್ದರು. ಅಂದರೆ ಇದರ ಚಿತ್ರ ಏನು ಎಂಬುದನ್ನು ತಿಳಿದುಕೊಳ್ಳಬೇಕು. ಇದರಲ್ಲಿ ಒಳ್ಳೆಯ ಜನರೇನಾದರೂ ಇದ್ದರೆ ಕೆಲವರಿಗೆ ಗೂಂಡಾಗಳು ಎಂದು ಹೇಳಬಹುದು. ಇರುವವರೆಲ್ಲಾ ಅವರೇ ಆದಾಗ...

ಶ್ರೀ ಎಂ. ವೀರಪ್ಪ ಮೊಯಿಲಿ.— ಪಕ್ಷದ ವಿಚಾರ ಹೇಳಿದಾಗ...

ಅಧ್ಯಕ್ಷರು.— ಅವರು ಪಕ್ಷಕ್ಕೆ ಹೇಳುತ್ತಿಲ್ಲ, ಯಾರೋ ಏನೋ ವಿಷಯ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರಲ್ಲ ಅವರಿಗೆ ಹೇಳುತ್ತಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.— ಪಕ್ಷದ ಬಗ್ಗೆ ಈಗ ಹೇಳುವುದಿಲ್ಲ. ಈಗ ಹೇಳುವುದು ನಾಗಭೂಷಣ ಆರಾಧ್ಯ ಅವರ ವಿಷಯ. ಪಕ್ಷದ ವಿಷಯ ಬೇರೆ ವಿಷಯ ಬಂದಾಗ ಹೇಳುತ್ತೇನೆ. ನಾಗಭೂಷಣ ಆರಾಧ್ಯ ಅವರ ಸ್ನೇಹಿತರು, ಗೂಂಡಾಗಳು ಹೋಗಿದ್ದರು. ಡೆಕ್ಕನ್ ಹೆರಾಲ್ಡ್ ಪತ್ರಿಕಾಲಯಕ್ಕೆ ಹೋಗಿ ಇದನ್ನು ಕೊಟ್ಟು ಇದನ್ನು ಪ್ರಿಂಟ್ ಮಾಡದೇ ಇದ್ದರೆ ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಹೆದರಿಸಿ ಬಂದಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ. ಅದಾದನಂತರ ಈ ತರಹ ಪಾಂಪ್‌ಲೆಟ್ ಮಾಡಿ ಹಂಚಿದ್ದಾರೆ. ಅದರ ಪರಿಣಾಮದ ಬಗ್ಗೆ ಸಾಕಷ್ಟು ಜನರು ಮಾತನಾಡಿದ್ದಾರೆ. ಇದರಲ್ಲಿ ಇನ್ನೂ ಒಂದು ಲೈನ್ ಬೇರೆ ಇದೆ. "The soft peddling attitude of our Chief Minister with the J. A. F. and its leaders be changed." ಅಂದರೆ ಮಾನ್ಯ ಮುಖ್ಯ ಮಂತ್ರಿಯವರು ಜೆ. ಎ. ಎಫ್‌ನವರ ಜೊತೆಯಲ್ಲಿ ಸರಸ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸಲಿ ಎಂದು ಅವರಿಗೆ ಟಮ್ರ್ಸ್ ಹಾಕಿದ್ದಾರೆ. ಇಲ್ಲಿ ಕಾನೂನು ಪ್ರಕಾರ ನಿಲುವಳಿ ಸೂಚನೆ ತರುವುದಕ್ಕೆ ಏನಾದರೂ ಘಟನೆ ಆಗಬೇಕು. ಹೆಣ ಬಿದ್ದಮೇಲೆ ಸೂಚನೆ ತರಬೇಕು. ಆದರೆ ಈಗಾಗಲೇ ಇದರ ವಾಸನೆ ಗೊತ್ತಾಗಿದೆ. ಅದರೂ ಪೋಲೀಸರನ್ನು ಕರೆಸಿ ಅರೆಸ್ಟ್ ಮಾಡಿಸದೇ ಏತಕ್ಕೆ ಬಿಟ್ಟಿದ್ದೀರಿ?

SRI MICHAEL FERNANDES.— Sir, I want to make a clarification, earlier why speaking in a fit of emotion, I said that the strike breakers Tamilians and Keralites. It is just that some of the people who are trying to spearhea the return of workers are indiv duals who are Tamilians or Keralites. It is not that the whole lot of Tamilians and Keralites are wanting to go back to work. And it is not as if all Kannadigas are quite intact. There are a few Kannadigas also who are trying to go inside. Another point which I would like to menstion is that there are cars with Tamilnadu and Andhra Pradesh number plates. These are found moving around distributing handbills and

the police jeeps goes behind those cars. I have passed on this information to Mr. Nizamuddin (Police Commissioner) the Car number as well as the Jeep number. But we have never heard, in the last few days, from the police that such cars have been impounded. Please let the Government instruct the police to impound those cars.

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).— ಮಾನ್ಯ ಅಧ್ಯಕ್ಷರೇ, ನಾನು ಈಗ ಅವರು ಹೇಳಿದ್ದನ್ನೇ ಹೇಳುವುದಿಲ್ಲ. ತಾವು ಅಭಿಪ್ರಾಯಪಟ್ಟ ಪ್ರಕಾರ ಇದರಲ್ಲಿರತಕ್ಕ ವಿಷಯ ಖಂಡನೀಯ ವಾದುದು ಎಂಬುದನ್ನು ಎಲ್ಲರೂ ಒಪ್ಪಲೇಬೇಕು. ನಮ್ಮ ಕರ್ನಾಟಕದಲ್ಲಿರುತ್ತೂ ಬೇರೆ ಬೇರೆ ಭಾಷೆಯನ್ನು ಮಾತನಾಡತಕ್ಕ ಜನರ ಬಗ್ಗೆ ಸುವಂಧುರ ಬಾಂಧವ್ಯವನ್ನು ಉಳಿಸಿಕೊಂಡು ಬಂದಿದ್ದೇವೆ. ಇದರ ಬಗ್ಗೆ ರಾಷ್ಟ್ರದ ಬೇರೆ ಬೇರೆ ರಾಜ್ಯಗಳ ನಾಯಕರೂ ಕೂಡ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ತಮಿಳು, ಮಲೆಯಾಳಿ, ಮರಾಟಿ, ಮುಂತಾದ ಬೇರೆ ಬೇರೆ ಭಾಷೆಗಳನ್ನು ಮಾತನಾಡತಕ್ಕ ಲಕ್ಷಾಂತರ ಜನರಿದ್ದಾರೆ. ಆವರ, ನಮ್ಮ ಮಧುರ ಬಾಂಧವ್ಯದ ಬಗ್ಗೆ ಯಾವುದೇ ವೈಪಮ್ಯ ಇಲ್ಲ. ಇಂಥ ವಾತಾವರಣದಲ್ಲಿ ಆದನ್ನು ಕದಡತಕ್ಕ ಪ್ರಯತ್ನ ನಡೆದಿದೆ. ಇದರ ಹಿನ್ನೆಲೆಯಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ಒಂದು ವಿಚಾರ ಬಂದಿದ್ದು ಅದು ಹೀಗಿದೆ ''ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾದ (ಐ) ಕರ್ನಾಟಕ ಸಮಿತಿಯ ಅಧ್ಯಕ್ಷ ನಾಗಭೂಷಣ ಆರಾಧ್ಯ ಅವರ ಮೇಲೆ ಮೊನ್ನೆ ನಡೆದ ಹಲ್ಲೆಯನ್ನು ವಿದ್ಯಾರ್ಥಿ ಪ್ರತಿನಿಧಿಗಳು, ಯೂತ್ ಕಾಂಗ್ರೆಸ್ (ಐ) ಖಂಡಿಸಿವೆ. ಸಂಯುಕ್ತ ಕ್ರಿಯಾರಂಗದ ನಾಯಕರು ಈ ಘಟನೆಗೆ ಕ್ಷಮಾಪಣೆ ಕೋರದಿದ್ದರೆ ಮುಂದಿನ ಪರಿಣಾಮವನ್ನು ಎದುರಿಸಬೇಕಾದೀತು ಎಂದು ಯುವಕ ಕಾಂಗ್ರೆಸ್ (ಐ)ನ ರಾಜ್ಯ ಸಮಿತಿ ಅಧ್ಯಕ್ಷ ಶ್ರೀ ಜಾರ್ಜ್ ನಿನ್ನೆ ಎಚ್ಚರಿಕೆ ಕೊಟ್ಟಿದ್ದಾರೆ. ಕ್ಷಮೆ ಕೇಳದಿದ್ದರೆ ಕ್ರಿಯಾರಂಗದ ನಾಯಕರ ಮನೆ ಮುಂದೆ ಘೇರಾವೊ ಕಾರ್ಯಕ್ರಮ ನಡೆಸುವುದಾಗಿ ಎನ್. ಎಸ್. ಯು.ಐ.ನ ಪ್ರತಿನಿಧಿಗಳು ತಿಳಿಸಿದ್ದಾರೆ... ಪಾಂಪ್‌ಲೆಟ್ ಬಂದಿದೆ. ಇದಾದಮೇಲೆ ಕಾಂಗ್ರೆಸ್ (ಐ) ಮುಖಂಡರಾದ ಜಾರ್ಜ್ ಅವರು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದು ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದಿದೆ. ಅಂದು ನಡೆದ ಘಟನೆಗಾಗಿ ಕ್ಷಮೆ ಕೇಳದಿದ್ದರೆ ಪರಿಣಾಮ ಎದುರಿಸ ಬೇಕಾದೀತು ಎಂಬ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಮುಂದಿನ ಪರಿಣಾಮವನ್ನು ಅನುಭವಿಸುವುದಕ್ಕೆ ಸಿದ್ಧರಾಗಬೇಕು ಎಂದು ಹೇಳಿ ಮನೆ ಮುಂದೆ ಘೇರಾವೊ ಮಾಡುವ ಬಗ್ಗೆ ಹೇಳಿದ್ದಾರೆ. ಈ ಪಾಂಪ್‌ಲೆಟ್ ನಲ್ಲಿ ಕೂಡ ಈ ಕಾಲಕೂಟ ಘಟನೆ ಬಗ್ಗೆ ಉಲ್ಲೇಖವಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಇದನ್ನು ಆಲೋಚನೆ ಮಾಡಬೇಕಾಗಿದೆ ವಾತಾವರಣವನ್ನು ಹದಗೆಡಿಸುವ ಪ್ರಯತ್ನ ಮಾಡುವುದಿಲ್ಲ ತಮ್ಮ ಮುಖಾಂತರ ಚರ್ಚೆಗೆ ಅವಕಾಶ ಕೇಳುವಾಗ ಮೂಲ ಉದ್ದೇಶವನ್ನು ಹೇಳಬೇಕಾಗಿದೆ. ಕಾಂಗ್ರೆಸ್(ಐ) ಯೂತ್‌ವಿಂಗ್ ಮತ್ತು ಕಾಂಗ್ರೆಸ್(ಐ) ಸ್ಟೂಡೆಂಟ್ಸ್ ವಿಂಗ್ ಹೆಸರಿನಲ್ಲಿ ಪಾಂಪ್‌ಲೆಟ್ ಬಂದಿದೆ ಮತ್ತು ಪತ್ರಿಕಾ ಹೇಳಿಕೆ ಕೂಡ ಬಂದಿದೆ.

ಕಾಂಗ್ರೆಸ್(ಐ) ಪಕ್ಷದಲ್ಲಿರುವ ''ಯೂತ್ ಕಾಂಗ್ರೆಸ್ ವಿಂಗ್'' ಒಂದು ಜವಾಬ್ದಾರಿಯುತವಾದ ವಿಭಾಗವೆಂದು ನಾನು ಭಾವಸುತ್ತೇನೆ. ಆದರ ಅಧ್ಯಕ್ಷರಾದ ಶ್ರೀ ಜಾರ್ಜ್ ಅವರು ರಾಜ್ಯದ ತುಂಬ ಪ್ರವಾಸ ಮಾಡುತ್ತಿದ್ದಾರೆ. ಆದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಅವರು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಶ್ರೀ ನಾಗಭೂಷಣ ಆರಾಧ್ಯ ಎನ್ನುವವರು ಯುವ ಕಾಂಗ್ರೆಸ್(ಐ)ನ ನಾಯಕರಾಗಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.— ಅವರಿನ್ನೂ ಶ್ರೀ ಮುಳ್ಳೂರು ಆನಂದರಾಯರಿಗೆ ಪರಿಚಯವಾಗಿದ್ದಂತೆ ಕಾಣಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನೂ ಆಗಿಲ್ಲವೆಂದು ಕಾಣುತ್ತದೆ- ಮುಖ್ಯವಾಗಿ ಕಾರ್ಮಿಕ ಚಳವಳಿಯನ್ನು ಶಾಂತಿಯುತವಾಗಿ ಮುಕ್ತಾಯಗೊಳಿಸುವ ಪ್ರಯತ್ನವನ್ನು ಮುರಿಯುವ ಯತ್ನ ಇಲ್ಲಿ ಇದೆ. ಕಾರ್ಮಿಕ ಸಮಸ್ಯೆ ಬಗ್ಗೆ ಚರ್ಚೆ ಮಾಡಿ ಪರಿಹಾರ ಕಂಡು ಹಿಡಿಯುವುದಕ್ಕಾಗಿ ಎಲ್ಲಿ ವಿರೋಧ ಪಕ್ಷಗಳ ನಾಯಕರ ಸಭೆಯನ್ನು ಇಂದು ಸಾಲ್ಕು ಗಂಟೆಗೆ ಕರೆಯುವ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಶನಿವಾರದ ದಿವಸವೇ ಹೇಳಿದ್ದಾರೆ, ಶುಕ್ರವಾರದ ದಿವಸ ದೆಹಲಿಗೆ ನಿಯೋಗವೊಂದನ್ನು ತೆಗೆದುಕೊಂಡು ಹೋಗುವುದಕ್ಕೆ ಒಪ್ಪಿಗೆಯನ್ನು ಅವರು ಕೊಟ್ಟಿದ್ದಾರೆ. ಈ ಎಲ್ಲ ಪ್ರಯತ್ನಗಳಿಗೆ

ಅಡ್ಡಿಯನ್ನುಂಟು ಮಾಡತಕ್ಕದ್ದೇ ಈ ಚಟುವಟಿಕೆಗಳ ಮೂಲ ಉದ್ದೇಶವೆಂದು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳನ್ನೂ ಮತ್ತು ಅವರ ಸರ್ಕಾರವನ್ನು ಬೇಜಾರಿಗೆ ಸಿಕ್ಕಿಸುವ ಪ್ರಯತ್ನ ಇಲ್ಲಿದೆ. ಕಾಂಗ್ರೆಸ್(ಐ) ಪಕ್ಷದಲ್ಲಿರುವ ಇನ್ನೊಂದು ಗುಂಪು ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವುದರ ಜೊತೆಗೆ ಕಾರ್ಮಿಕ ಬಿಕ್ಕಟ್ಟನ್ನು ಬಿಡಿಸುವುದಕ್ಕೆ ಈ ಸರ್ಕಾರಕ್ಕೆ ಅವಕಾಶ ಕೊಡದಿರುವ ಪ್ರಯತ್ನ ಇದಾಗಿದೆ. ಆದುದರಿಂದ, ಇದು ಬಹಳ ಮಹತ್ವವಾದ ವಿಚಾರವಾಗಿದ್ದು, ಇದನ್ನು ಸರ್ಕಾರ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ. ಒಡೆದು ಆಳುವ ಪದ್ಧತಿ ಬ್ರಿಟೀಷರ ಕಾಲದಲ್ಲಿತ್ತು. ಅದನ್ನು ಇವರು ಮಾಡುವುದಕ್ಕೆ ಹೋಗಿ ವಿಫಲರಾದರು. ಈಗ ಬಡಿದು ಆಳುವ ಪದ್ಧತಿ ಅನುಸರಿಸುತ್ತಿದ್ದಾರೆ. ಇದರ ಗಂಭೀರತೆಯನ್ನು ಅರಿತ ಸರ್ಕಾರ ಈಗಾಗಲೇ ಏನು ಕ್ರಮ ಕೈಗೊಂಡಿದೆ ಎಂಬುದನ್ನು ನಾವು ತಿಳಿಯಬೇಕಾಗಿದೆ. ಇದು ಕಾರ್ಮಿಕ ನಾಯಕರನ್ನು ಅಂಜಿಸುವುದ ಕ್ಕಾಗುವುದಿಲ್ಲ. ಅವರಿಗೆ ಗೊತ್ತಿದೆ ಈ ರೀತಿ ಹಸ್ತಪ್ರತಿಗಳನ್ನು ಹಂಚಿ, ಪತ್ರಿಕೆಗಳಲ್ಲಿ ಬರೆದು, ಗೂಂಡಾ ಜನರನ್ನು ಕರೆದುಕೊಂಡು ಹೋಗಿ ಹೊಡೆಸಿ ಬಡಿಸಿ ಕಾರ್ಮಿಕ ನಾಯಕರನ್ನು ಅಂಜಿಸುವುದಕ್ಕಾಗುವುದಿಲ್ಲ. ಹೀಗೆ ಯಾವ ರಾಷ್ಟ್ರದಲ್ಲೂ ಆಗಿಲ್ಲ, ಯಾವ ರಾಜ್ಯದಲ್ಲೂ ಆಗಿಲ್ಲ. ಆದರ ಬದಲಿಗೆ ಇಂತಹ ಕ್ರಮಗಳಿಂದ ಅವರು ಇನ್ನೂ ಹೆಚ್ಚು ಹೆಚ್ಚು ಬೆಳೆಯುತ್ತಾರೆ, ಬಲಗೊಳ್ಳುತ್ತಾರೆ. ಆದುದರಿಂದ, ಇಲ್ಲಿ ನಿಮ್ಮ ಸರ್ಕಾರವನ್ನು ಉರುಳಿಸುವ ಪ್ರಯತ್ನ ಎದ್ದು ಕಾಣುತ್ತಿದೆ. ಇದರ ಬಗ್ಗೆ ತಾವು ಎಚ್ಚರ ವಹಿಸಬೇಕು. ಇಲ್ಲದಿದ್ದರೆ, ಮಾನ್ಯ ಗುಂಡೂರಾಯರನ್ನು ತೆಗೆಯುವ ಪ್ರಯತ್ನ ನಡೆದೀತು...

ಶ್ರೀ ಜೆ. ಹೆಚ್. ಪಟೇಲ್.— ಅದೆಲ್ಲಾ ತಮಗೇತಕ್ಕೆ ? ಹೋಗಲಿ ಬಿಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಗುಂಡೂರಾಯರು ಹೋಗಿ ಹಸ್ತಪ್ರತಿ ಹಂಚಿದವರೇ ಅಧಿಕಾರಕ್ಕೆ ಬಂದಾರೆಂಬ ಚಿಂತೆ ನನಗೆ.

ಶ್ರೀ ಮಳ್ಳೂರು ಆನಂದರಾವ್.— ಇಲ್ಲದಿರುವುದನ್ನೆಲ್ಲ ಏತಕ್ಕೆ ಕಲ್ಪನೆ ಮಾಡಿಕೊಳ್ಳುತ್ತಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಚುನಾವಣೆ ನಡೆದರೆ ಪರವಾಗಿಲ್ಲ. ಚುನಾವಣೆ ನಡೆಯದೆ ಸರ್ಕಾರ ಬದಲಾವಣೆಯಾದರೆ ಇಂತಹ ಜನ ಬಂದಾರೆಂಬ ಆಂಜಿಕೆ ನನಗೆ. ಇದು ಬಹಳ ಮಹತ್ವವಾದ ವಿಚಾರ. ಮಾನ್ಯ ಅಧ್ಯಕ್ಷರು, ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕು ಮತ್ತು ಸರ್ಕಾರ ಈ ಬಗ್ಗೆ ಏನೇನು ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಹೇಳಬೇಕು. ಕಾರಿನ ಮೇಲೆ ನಡೆದಿರುವ ಹಲ್ಲೆಯನ್ನೂ ನಾವು ಖಂಡಿಸಿದ್ದೇವೆ. ಮಾನ್ಯ ರಾಜಗೋಪಾಲ್ ಅವರ ಮೇಲೆ ನಡೆಸಿದ ಹಲ್ಲೆಯನ್ನೂ ಖಂಡಿಸಿದ್ದೇವೆ. ಕಾರಿನ ಮೇಲೆ ನಡೆದ ಹಲ್ಲೆ ಸಂಬಂಧವಾಗಿ ಬಂಧಿಸಿರುವವರಲ್ಲಿ ಕನ್ನಡಿಗರು ಯಾರು, ತಮಿಳರು ಯಾರು ಮತ್ತು ಮಲೆಯಾಳರು ಯಾರು ಎಂಬುದನ್ನು ಪಟ್ಟಿ ತರಿಸಿ ನೋಡಬೇಕು. ಕಾರಿಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಪೋಲೀಸರು ಕೆಲವು ಜನರನ್ನು ಬಂಧಿಸಿದ್ದಾರೆ...

ಶ್ರೀ ಮೈಬೇಲ್ ಫರ್ನಾಂಡೀಸ್.— ಬೆಂಕಿ ಹಚ್ಚಿದವರನ್ನು ಬಂಧಿಸಿಲ್ಲ, ಯಾರಯಾರನ್ನೋ ಬಂಧಿಸಿದ್ದಾರೆ,

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಘಟನೆಯಲ್ಲಿ ನಿಜವಾಗಿ ಇದ್ದವರನ್ನು ಪತ್ತೆಹಚ್ಚಬೇಕು ಮತ್ತು ಈ ಸಂಬಂಧದಲ್ಲಿ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಮತ್ತು ಇತರ ಕೆಲವು ಸದಸ್ಯರು ಬೆಂಗಳೂರು ನಗರದಲ್ಲಿನ ಅನೇಕ ಕಡೆಗಳಲ್ಲಿ ಹಾಕಿದ ಭಿತ್ತಿ ಪತ್ರ ಮತ್ತು ಹಸ್ತಪ್ರತಿಗಳ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ನಿಲುವಳಿ ಸೂಚನೆ ಯನ್ನು ಮಂಡಿಸಲು ಪ್ರಸ್ತಾವಿಕವಾಗಿ ಮಾತನಾಡಿದ್ದಾರೆ.

ಅಧ್ಯಕ್ಷರು.—ನಿಲುವಳಿ ಸೂಚನೆಯನ್ನು ಮಂಡಿಸಿಲ್ಲ. ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೌದು. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ಅವರು ಕೇಳಿದ್ದಾರೆ. ಮೊದಲನೆಯದಾಗಿ ನಾನು ಹೇಳುವುದು ಇಷ್ಟೆ. ಕೇಂದ್ರಾಧೀನ ಸಾರ್ವಜನಿಕ ಉದ್ದಿಮೆಗಳಲ್ಲಿ ನಡೆಯುತ್ತಿರುವ ಮುಷ್ಕರದ ಬಗ್ಗೆ ಶಾಂತಿ ಸಂಧಾನ ಮಾಡಬೇಕೆಂದೂ ಮತ್ತು ಈ ಬಗ್ಗೆ ಯಾವುದೇ ರೀತಿಯ ತೊಂದರೆ ಇಲ್ಲದೆ ಸಮಸ್ಯೆಯನ್ನು ಪರಿಹರಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಕಳಕಳಿಯ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ನಾಲ್ಕು ಗಂಟೆಗೆ ವಿರೋಧ ಪಕ್ಷದ ಸದಸ್ಯರನ್ನು

ಮತ್ತು ಇದಕ್ಕೆ ಸಂಬಂಧಪಟ್ಟ ಶಾಸಕರನ್ನು ಕರೆದು ಚರ್ಚೆ ಮಾಡಿ, ನಂತರ ದೆಹಲಿಗೂ ಒಂದು ನಿಯೋಗವನ್ನು ಕರೆದುಕೊಂಡು ಹೋಗಿ, ಕಾರ್ಮಿಕ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹಾರ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಸತತವಾಗಿ ಚಿಂತನೆ ಮಾಡುತ್ತಿದ್ದಾರೆ. ಆದರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ initiative ತೆಗೆದುಕೊಳ್ಳುತ್ತಿಲ್ಲ, ಅದನ್ನು ಹಾಗೆ ಬಿಟ್ಟಿದ್ದಾರೆ ಎನ್ನುವ ಒಂದು ರೀತಿಯಾದ ಆಪಾದನೆ ವಿರೋಧ ಪಕ್ಷದ ಕಡೆಯಿಂದ ಬಂತು. ಈ ರೀತಿ ಆಪಾದನೆ ಮಾಡುವುದು ಖಂಡಿತ ಸಾಧುವಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಆ ರೀತಿ ಆಪಾದನೆ ಮಾಡಿಲ್ಲ.

SRI M. VEERAPPA MOILY:—It has been raised here. I am sorry one of the members, Sri Lakshmisagar said that he lost the initiative If he has not said, it is OK.

SRI A. LAKSHMISAGAR:—When the discussion on the admission of the adjournment motion came up for discussion, I said that the situation now is tense in Bangalore and it appears to be that the Chief Minister's initiative in solving this problem has been wrested from him by someone. This is what I said and I stand by it, To this statement I made a reference.

SRI M. VEERAPPA MOILY:—If he has said so, it is OK. It is clarified. There was some accusations. that is why I raised.

SRI MICHAEL B. FERNANDES:—So you agree that the initiative was wrested away by some one who is playing politics,

SRI M. VEERAPPA MOILY.—This is not correct allegation. ನಮ್ಮ ಸರ್ಕಾರದ ಮಂಟ್ರಿಗಾಗಲೀ ಅಥವಾ ನಮ್ಮ ಪಕ್ಷದ ಮಂಟ್ರಿಗಾಗಲೀ ಕಾರ್ಮಿಕರ ಮುಷ್ಕರವನ್ನು ಬಲವಾಗಿ ಬಗ್ಗು ಬಡಿಯಬೇಕು ಅಥವಾ ಬೆದರಿಕೆಯಿಂದ ಕಾರ್ಮಿಕರನ್ನು ಕೆಲಸಕ್ಕೆ ಕರೆಸಬೇಕೆಂಬ ಉದ್ದೇಶ ಯಾವತ್ತೂ ಇಲ್ಲ. ಇದ್ದಿದ್ದರೆ ಮಾನ್ಯ ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರೊಡನೆ ಚರ್ಚೆ ಮಾಡಲು ಮತ್ತು ಸಂಧಾನಕ್ಕಾಗಿ ದೆಹಲಿಗೆ ನಿಯೋಗ ಕರೆದುಕೊಂಡು ಹೋಗಲು ಮುಂದೆ ಬರುವ ಪ್ರಮೇಯವೇ ಇರುತ್ತಿರಲಿಲ್ಲ. ಸದುದ್ದೇಶದಿಂದ ಸರ್ಕಾರ ಕಾರ್ಯಪ್ರವೃತ್ತವಾಗಿರುವಾಗ ಮತ್ತು ಸಮಸ್ಯೆಯನ್ನು ಬಗೆಹರಿಸಲು ಸಾಕಷ್ಟು ಪ್ರಯತ್ನ ಮಾಡುತ್ತಿರುವಾಗ ಈ ರೀತಿಯ ಭಿತ್ತಿ ಪತ್ರಗಳು ಕಾಣಿಸಿಕೊಂಡಿರುವುದು ನಮಗೆ ಬಹಳ ವಿಷಾದವಾಗಿದೆ. ಯಾರೇ ಮಾಡಿರಲಿ. ಬಹಳ ದೊಡ್ಡ ತಪ್ಪು ಕೆಲಸ ಮಾಡಿದ್ದಾರೆನ್ನುವುದೇ ಸರ್ಕಾರದ ಒಂದು ಅಭಿಪ್ರಾಯ. ಆದರೆ, ಪ್ರಶ್ನೆ ಇಷ್ಟೆ, ಈ ರೀತಿಯಾದ ಹಸ್ತ ಪ್ರತಿಗಳನ್ನು ಮತ್ತು ಭಿತ್ತಿ ಪತ್ರಗಳನ್ನು ಯಾರು ಮಾಡಿದ್ದಾರೆ? ಯಾವುದಕ್ಕೆ ಮಾಡಿದ್ದಾರೆ? ಎನ್ನುವುದು ಮುಖ್ಯ. ತಮಗೆಲ್ಲಾ ಗೊತ್ತಿದೆ, ಕೆಲವು ಸಾರಿ ಯಾರ ಪೆಸರಿನಲ್ಲಿ ಏನೋ ಮಾಡುವಂತಾದ್ದು ಇದೆ. ನಮ್ಮ ಸರ್ಕಾರ ಸದುದ್ದೇಶದಿಂದ ಸಾರ್ವಜನಿಕ ಉದ್ದಿಮೆಗಳಲ್ಲಿ ನಡೆಯುತ್ತಿರುವ ಚಳವಳಿಯನ್ನು ಕೊನೆಗಾಣಿಸಬೇಕು. ಶಾಂತಿಯುತವಾಗಿ ಬಗೆಹರಿಸಬೇಕೆಂದು ಪ್ರಯತ್ನ ಮಾಡುತ್ತಿರುವಾಗ ಇಂಥ ಬ್ಲಾಕ್‌ಮೈಲ್ ಮಾಡುವುದಕ್ಕೆ ಪ್ರಯತ್ನ ಮಾಡಿದವರನ್ನು ಖಂಡಿತವಾಗಿಯೂ ಸರ್ಕಾರ ಪರಿಶೀಲನೆ ಮಾಡಿ, ಕಾನೂನು ಪ್ರಕಾರ ಅಪರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದು ಮುಂದು ನೋಡುವುದಿಲ್ಲ. ಈ ಪ್ರಶ್ನೆ ಇಲ್ಲಿ ಬಂದಾಗ, ಅದರಲ್ಲಿಯೂ ಅಲ್ಪಸಂಖ್ಯಾತರ ಪ್ರಶ್ನೆ ಬಂದಾಗ ನಮ್ಮ ಪಕ್ಷವೇ ಆಗಲಿ, ಸರ್ಕಾರವೇ ಆಗಲಿ ಯಾವ ಒಂದು ನೀತಿಯ ಮೂಲ ಸ್ವರೂಪ ಇದೆ. Protection of the minorities, backward classes and weaker sections ಯಾವಾಗಲೂ ಒಂದು ಉನ್ನತಸ್ಥಾನ ಕೊಡಲಾಗಿದೆ. ಅದನ್ನು ನಮ್ಮ ಪಕ್ಷ, ನಮ್ಮ ಸರ್ಕಾರ ಕಾಪಾಡಿಕೊಂಡು ಬಂದಿದೆ, ಮುಂದೆಯೂ ಕೂಡ ಭದ್ರವಾಗಿ ಇದನ್ನು ಕಾಪಾಡಿಕೊಂಡು ಬರುತ್ತದೆ. ಇದರ ಬಗ್ಗೆ ಯಾರು ಯಾವ ರೀತಿಯಾದಂತ ಅನುಮಾನವನ್ನು ಇಟ್ಟುಕೊಳ್ಳಬೇಕಾಗಿಲ್ಲ ಅಲ್ಪಸಂಖ್ಯಾತರಿಗೆ ಸಂಪೂರ್ಣವಾದ ರಕ್ಷಣೆಯನ್ನು ನಮ್ಮ ಸರ್ಕಾರ ಯಾವಾಗಲೂ ಕೊಡುತ್ತದೆ. ಭಿತ್ತಿಪತ್ರಗಳ ವಿಚಾರವನ್ನು ಹೆಚ್ಚು

ಪ್ರಸ್ತಾಪ ಮಾಡುವುದರಿಂದ ಪ್ರಯೋಜನವಾಗುವ ಬದಲು ಅದರಿಂದ ನಮ್ಮ ಸಮಾಜಕ್ಕೆ, ಒಂದು ಆರೋಗ್ಯಕರ ವ್ಯವಸ್ಥೆಗೆ ಹೆಚ್ಚು ತೊಂದರೆಯಾಗುತ್ತದೆ. ಆದ್ದರಿಂದ ಇದರ ಪ್ರಸ್ತಾಪವನ್ನು ಇಲ್ಲಿಗೆ ಬಿಡಬೇಕೆಂದು ಹೇಳುತ್ತೇನೆ.

SRI J.H. PATEL.—Please tell us what action has been taken. We never doubt your bona fide; We never doubt. What action has been done so far as this publication of this pamphlet is concerned? Please tell us what you have done,

ಶ್ರೀ ಎಂ. ವೀರಪ್ಪಮೊಯ್ಲಿ.—ಸರ್ಕಾರ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಪೆಚ್. ಶ್ರೀನಿವಾಸ್.—ತಾವು ಹೇಳಿದಹಾಗೆ ಬೇನಾಮಿ ಆಗಿರಬಹುದು ನಿಜ. ತಮ್ಮ ಪಕ್ಷಕ್ಕೆ, ಪಕ್ಷದ ವಿಭಾಗಗಳಿಗೆ ಕೆಟ್ಟ ಹೆಸರು ತರುವ ದೃಷ್ಟಿಯಿಂದ ಇಂಥಾದ್ದು ನಡೆದಿರಬಹುದು. ಆದರೆ; ಇಲ್ಲಿ ಇನ್ನೊಂದು ಪ್ರಶ್ನೆಯಿದೆ, ಈ ಸಭೆಯ ಮಾನ್ಯ ಸದಸ್ಯರುಗಳು ಕಣ್ಣಿನಿಂದ ನೋಡಿದ್ದಾರೆ. ಇವರ ಹಿಂದೆ ಮುಂದೆ ಪೋಲೀಸ್ ಜೀಪು ಇದ್ದುದನ್ನು ನೋಡಿದ್ದಾರೆ. It contains so many things which constitute cognisable offence under the existing law of the country. ಪೋಲೀಸಿನವರು ತಕ್ಷಣವೇ ಏತಕ್ಕೆ ಅವರನ್ನು ಹಿಡಿಯಲಿಲ್ಲ? ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡುವ ಅಗತ್ಯ ಇಲ್ಲವೆ? ಈ ಬಗ್ಗೆ ಏನು ಹೇಳುತ್ತೀರಿ?

SRI A. LAKSHMISAGAR.—For the last three or four days this has been going on. This is not as if the pamphlet appeared just this morning. It has been going on for the last three or four days and the Police must be knowing and the Government must be knowing. If that is so, what action has been taken against these gundas

ಶ್ರೀ ಜೆ.ಹೆಚ್. ಪಟೇಲ್.—ಡೆಕ್ಕನ್ ಹೆರಾಲ್ಡ್ ಪತ್ರಿಕಾ ಕಾರ್ಯಾಲಯಕ್ಕೆ ಹೋಗಿ, ಇವನು ಬೇನಾಮಿ ಮನುಷ್ಯನಲ್ಲ. ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾನೆ. ಇದನ್ನು ಪಬ್ಲಿಷ್ ಮಾಡುವುದಿಲ್ಲವೆಂದು ಹೇಳಿದಕ್ಕೆ ಮಾರನೇ ದಿನ ಇಬ್ಬರು ಗೂಂಡಾಗಳನ್ನು ಕಳುಹಿಸಿ, ಬೆದರಿಸಿ ಬಂದಿದ್ದಾರೆ. ಇಷ್ಟೆಲ್ಲಾ ಗೊತ್ತಿದ್ದರೂ ಏನೂ ಮಾಡಲಿಲ್ಲವೆಂದರೆ ಏನು ಸ್ವಾಮಿ

SRI A. LAKSHMISAGAR.—As the General Secretary he must be knowing.

MR SPEAKER.—He is a Minister here. He is not the General Secretary. Let us not mix up the matter.

ಶ್ರೀ ಬಿ.ವಿ. ಕಕ್ಕಿಲಾಯ.—ಈ ದೇಶದ ಪ್ರಧಾನ ಮಂತ್ರಿಯವರಿಗೆ, ಇಲ್ಲಿನ ವರದಿಯ ಯಥಾ ನಕಲು ಒಂದು ಪತ್ರ ಈ ರಾಜ್ಯದಿಂದ ಹೋಗಿದೆ. ವಿಭಾಗದಿಂದ ಹೋಗಿದೆ. ತಾವು ನಾಲ್ಕು ಗಂಟೆಗೆ ವಿರೋಧಪಕ್ಷದವರ ಸಭೆ ಕರೆದು ಮಾತುಕತೆ ನಡೆಸುತ್ತೀರಿ. ಈ ಮಧ್ಯೆ ಪತ್ರ ಹೋಗಿದೆ. ಇದರ ಪರಿಣಾಮ ಏನಾಗುತ್ತೆ ಎಂಬುದನ್ನು ಯೋಚನೆ ಮಾಡಬೇಡವೆ? ಪ್ರಧಾನ ಮಂತ್ರಿಯವರಿಗೆ ಇಲ್ಲಿ ನಡೆಯುವಂತ ವಿಚಾರಗಳ ಬಗ್ಗೆ ಸರ್ಕಾರದ ಅಭಿಪ್ರಾಯ ಯಾವರೀತಿ ಇದೆ ಎಂಬುದನ್ನು ತಿಳಿಸಿದ್ದೀರಾ? ತಿಳಿಸಿದ್ದರೆ ಅದು ಏನೆಂಬುದನ್ನು ತಿಳಿಸುತ್ತೀರಾ? ನಾವು ಹೋಗಿ ಫಲಕಾರಿಯಾಗದೇ ಇದ್ದರೆ ಏನು ಪ್ರಯೋಜನ? ಈ ತಿಂಗಳು ೫ನೇ ತಾರೀಖು ಪ್ರಧಾನ ಮಂತ್ರಿಯವರಿಗೆ ಪತ್ರ ಹೋಗಿದೆ.

ಅಧ್ಯಕ್ಷರು.—೫ನೇ ತಾರೀಖು ಪತ್ರ ಹೋಗಿದೆ, ನಾವು ೬ನೇ ತಾರೀಖು ಸೇರಿದ್ದೇವೆ; ನಿಲುವಳಿ ಸೂಚನೆ ಬಗ್ಗೆ ೬–೭ಕ್ಕೆ ಪ್ರಸ್ತಾಪ ಆಗಿದೆ. ೭ನೇ ತಾರೀಖು ಆದರೂ ಯಾರ ಗಮನಕ್ಕೂ ಬಂದಿಲ್ಲ. ಅಂದರೆ; ಭಿತ್ತಿ ಪತ್ರ ಹೊರಗೆ ಬಂದಿಲ್ಲವೆಂದು ಅರ್ಥವಾಗುತ್ತೆ. ಬಹುಶಃ ನಿನ್ನೆ ದಿವಸ ಇದು ಆಗಿರಬಹುದು; ವಿಚಾರಿಸುತ್ತೇನೆ; ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ,—ನಾನು ಈಗಾಗಲೇ ಹೇಳಿದ್ದೇನೆ. ಪೋಲೀಸಿನವರು ತನಿಖೆ ಮಾಡುತ್ತಿದ್ದಾರೆ. ಶನಿವಾರ ಬೆಳಿಗ್ಗೆ ನಾನು ಮುಂಬಯಿಗೆ ಹೋಗಿದ್ದೆನು; ಅಷ್ಟರವರೆಗೆ ನಮ್ಮ ಗಮನಕ್ಕೆ ಬಂದಿರಲಿಲ್ಲ.

ಅಧ್ಯಕ್ಷರು.—ಮಾನ್ಯ ಸಭೆಯ ಗಮನಕ್ಕೂ ಬಂದಿರಲಿಲ್ಲ.

ಶ್ರೀ ಮೈಕೇಲ್ ಫರ್ನಾಂಡೀಸ್.— ಶನಿವಾರ ರಾತ್ರಿ; ಭಾನುವಾರ ಬೆಳಿಗ್ಗೆ ಡಿಸ್ಟ್ರಿಬ್ಯೂಟ್ ಆಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಡೆಕ್ಕನ್ ಹರಾಲ್ಡ್ ಪತ್ರಿಕಾ ಕಾರ್ಯಾಲಯಕ್ಕೆ ಹೋಗಿ ಬೆದರಿಕೆ ಹಾಕಿದ್ದಾರೆಂದು ಹೇಳಿದ್ದಾರೆ; ಆದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ, ಅದಕ್ಕಾಗಿ ಅವಕಾಶ ಕೊಡ ಬೇಕಾಗುತ್ತದೆ. ಈ ವಿಚಾರದಲ್ಲಿ ಸರ್ಕಾರ ಸುಮ್ಮನೆ ಕೂತಿಲ್ಲ. ವಿಚಾರದ ಗಂಭೀರತೆಯನ್ನು ಸರ್ಕಾರ ಸಂಪೂರ್ಣವಾಗಿ ಅರಿತಿದೆ ಸರ್ಕಾರದ ನೀತಿ ಏನು ಎಂಬುದನ್ನು ಸಭಾ ನಾಯಕರು ಸ್ಪಷ್ಟವಾಗಿ ಹೇಳಿ ದ್ದಾರೆ. ಚಳುವಳಿಯನ್ನು ಶಾಂತಿಯುತವಾಗಿ ಬಗೆಹರಿಸಬೇಕೆಂಬುದೇ ಸರ್ಕಾರದ ಇಚ್ಛೆ; ಆ ದೃಷ್ಟಿ ಯಿಂದ ನಾಲ್ಕು ಗಂಟೆಗೆ ವಿರೋಧ ಪಕ್ಷದ ಸಭೆ ಕರೆದಿದ್ದಾರೆ; ಹಿಂಸಾಕೃತ್ಯವನ್ನು ಬೆದರಿಕೆಯನ್ನು ಸರ್ಕಾರ ಸಹಿಸುವುದಿಲ್ಲ. ಈ ಬಗ್ಗೆ ಯಾವ ರೀತಿಯಾದ ಪ್ರೋತ್ಸಾಹವನ್ನು ಸರ್ಕಾರ ಕೊಡುವುದಕ್ಕೆ ತಯಾರಿಲ್ಲ. ಎನ್‌ಎಸ್‌ಯುಐ ಪ್ರೆಸಿಡೆಂಟರು ಪತ್ರಿಕಾ ಕಾರ್ಯಾಲಯಕ್ಕೆ ಹೋಗಿ ಬೆದರಿಕೆ ಹಾಕಿದ ವಿಚಾರವನ್ನು ಸರ್ಕಾರ ಖಂಡಿತವಾಗಿಯೂ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತದೆ.

Government's stand is very clear. We will never subscribe. We will not subscribe and we will definately put down any such attempts.

SRI K. H. SRINIVAS.— He has not made any allegation that the Government subscribes. But, a time has come wherein as a party and as a Government you have to take cognisance of this development, and take positive steps to prevent such happeniugs. Recurrently such things have been happening. It is not bringing any credit either to the party or we do not enjoy anything by raising such matter. But the situation has been brought to such an extent now warranting your positive intervention, not just taking note of them. For a moment we cannot subscribe to the allegation that the Government is a party to this. But, you should not absolve Government's responsibility to put down such things and conveying to whomsoever is concerned whether they belong to your party or otherwise, they must be told. It must be conveyed to their mind and heart that your Government will not tolerate such things.

SRI P. RAMDEV.— He has tried to convince this House. But, unfortunately there is an Intelligence Department in the Government. They have given all the reports.

ಅಧ್ಯಕ್ಷರು. — ತಮಗೆಲ್ಲಾ ಗೊತ್ತಿದ್ದರೆ, ತಾವೇ ಹೇಳಬಹುದಾಗಿತ್ತು.

SRIP. RAMDEV.—What is their report? ಹೋಂ ಮಿನಿಸ್ಟರ್‌ಗೆ ಗೊತ್ತಿಲ್ಲ ಏನ್ನುವುದು ಸರಿಯಲ್ಲ. ತಪ್ಪಿತಸ್ಥರ ಮೇಲೆ ಕ್ರಮ ಏತಕ್ಕೆ ತೆಗೆದುಕೊಳ್ಳುತ್ತಿಲ್ಲ, ತೆಗೆದುಕೊಳ್ಳುವುದಕ್ಕೆ ಏನು ತೊಂದರೆ ಇದೆ? ನಿಮ್ಮ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಏನು ಕೆಲಸ ಮಾಡುತ್ತಿದೆ?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.— ಮಾನ್ಯ ಮೊಯಿಲಿರವರು ಒಂದು ವಿಚಾರ ತಿಳಿದುಕೊಳ್ಳ ಬೇಕಾಗಿದೆ. ಪೋಲೀಸಿನವರಿಗೆ ಇದರ ಬಗ್ಗೆ ವಿಶೇಷವಾದ ವಿಚಾರಗಳು ಗೊತ್ತಿದೆ: ಐ.ಟಿ.ಐ. ಕಾರ್ಮಿಕರು ನನ್ನನ್ನು ಬರ ಮಾಡಿದಾಗ, ನಾನು ಅಲ್ಲಿಗೆ ಹೋಗಿದ್ದಾಗ ಗೇಟ್ ಹತ್ತಿರ

ಪೋಲೀಸ್ ಪ್ಲಾಟೂನ್‌ಗಳು, ೩ — ೪ ಪೋಲೀಸ್ ವ್ಯಾನುಗಳು ಇದ್ದವು. ಅಲ್ಲಿಂದ ಹೋಗುತ್ತಾ ಇಲ್ಲ ಅವು. ಹಾಗೆಯೇ ಅಲ್ಲಿರುವಾಗ್ಕೆ ಪಕ್ಕದಲ್ಲಿ ಗೋಡೆಯ ಮೇಲೆ ಪೋಸ್ಟರು ಗಳನ್ನು ಅಂಟಿಸಿದ್ದಾರೆ. ನಾನು ವಾಪಸ್ಸು ಬಂದು ಈ ವಿಚಾರವನ್ನು ಪೋಲೀಸ್ ಕಮೀಷನರ್ ನಿಜಾಮುದ್ದೀನ್‌ರವರ ಗಮನಕ್ಕೆ ತಂದೆ, ಸಾಯಂಕಾಲ ನಾನು ಅಲ್ಲಿ ಪುನಃ ಹೋಗಬೇಕಾದರೆ, ನಮ್ಮವರು ಕೆಲವರು ಪೋಸ್ಟರುಗಳನ್ನು ಹರಿದು ಹಾಕಿದ್ದರು, ಇನ್ನು ಕೆಲವು ಇವೆ. You can still see some bits and some posters which were nicely pasted up are still there ಪೋಸ್ಟರುಗಳನ್ನು ಇಂಗ್ಲೀಷಿನಲ್ಲಿ, ಕನ್ನಡದಲ್ಲಿ ಹಾಗೂ ತಮಿಳಿನಲ್ಲಿ ಹಾಕಿದ್ದಾರೆ. ಪೋಲೀಸಿನವರು ಅದನ್ನು ಓದಿ ಏನು ಎನ್ನುವುದನ್ನು ತಿಳಿಯಬಹುದಾಗಿತ್ತು. ಇದನ್ನು ಏತಕ್ಕೆ ಅವರು ತಡೆಯಲಿಲ್ಲ. ಪೋಲೀಸ್ ಜೀಪ್‌ಗಳು ಹಿಂದೆ ಹೋಗಿ ಅವರಿಗೆ ಪ್ರೊಟೆಕ್ಷನ್ ಕೊಡುತ್ತಿದ್ದರು. ಯಾರೂ ಆ ಪೋಸ್ಟರ್ ಗಳನ್ನು ತೆಗೆಯದ ಹಾಗೆ ನೋಡಿಕೊಳ್ಳುತ್ತಿದ್ದರು. ಹೀಗೆ ವಿಚಾರವಾಗಿ, ಮಂತ್ರಿಗಳು ಹೇಳುವುದು ನಮಗೆ ಆರ್ಥವಾಗುತ್ತಿಲ್ಲ.

3-00 P. M.

Because the Minister here in this Hall and in his chambers may be thinking on those lines, that the Government will not allow all these things. But then why has the Government allowed the police to allow those rowdies, those anti-social elements. these anti-national elements, now anti-national integration minded elements, to do what they have done ? This the Minister does not say. He may now have an investigation to find out who printed it. But how is it that police intelligence failed to discover such huge posters printed without the name of the press, or such a large quantity of handbills printed without the name of the press, and then published under police protection? How did police intelligence fail? As far as the law and order situation is concerned, you have such a large number of police, a posse of police -an army of police – a phalanx of police brought from out side. So Our local police was available for this intelligence work. Then why have they failed? This is the quostion he must answer. ನಮ್ಮ ಕಡೆಯವರನ್ನು ಹಿಡಿಯಲು ಕೂಡಲೇ ಓಡಿ ಬರುತ್ತಾರೆ. ಎಲ್ಲೋ ಬಸ್ಸಿಗೆ ಕಲ್ಲು ತೂರಿದರೆ ನಮ್ಮ ೨೦ ಜನ ಕೂಡಲೇ ಅರೆಸ್ಟ್ ಆಗುತ್ತಾರೆ. ಅವರು ಮನೆಯಲ್ಲಿ ಇದ್ದರೂ ಅಥವಾ ಎಲ್ಲೋ ದೂರದಲ್ಲಿದ್ದರೂ, ಸಿನಿಮಾದಲ್ಲಿದ್ದರೂ, ಕಲ್ಲು ತೂರಿದ್ದವರಿದ್ದರೂ ಅವ ರನ್ನು ಕೂಡಲೇ ಓಡಿದುಕೊಂಡು ಹೋಗುತ್ತಾರೆ. ಆದರೆ ಆ ಕಡೆಯವರನ್ನು ಇನ್ನೂ ಅರೆಸ್ಟ್ ಮಾಡಿಲ್ಲ. ಇದಕ್ಕೆ ಕಾರಣ ಏನು?

ಶ್ರೀ ವಿ. ವೀರಪ್ಪ ಮೊಯಿಲಿ — ಅಧ್ಯಕ್ಷರೆ, ತನಿಖೆ ವಿಚಾರ ಬೇರೆ. ಹಿಂದೆ ಪ್ರಿಂಟ್ ಮಾಡಿದ್ದು ಹಿಂದಿನ ಚಟುವಟಿಕೆಗೆ ಸೀಮಿತವಾಗಿದ್ದರೂ ಇನ್ನು ಮುಂದೆ ಕೂಡ ಇಂತಹ ಚಟುವಟಿಕೆ ನಡೆದರೆ ಅದನ್ನು ಹೇಗೆ ನಿಲ್ಲಿಸಬೇಕು ಅದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. Across the floor certain allegations have been made against X, Y, Z. ಅದನ್ನು ಕೂಡ ಸರ್ಕಾರ ಗಮನಕ್ಕೆ ತೆಗೆದುಕೊಂಡು ತನಿಖೆ ಮಾಡುತ್ತೇವೆ. ಪೋಲೀಸರು ಪ್ರೋತ್ಸಾಹ ಕೊಟ್ಟರು ಅಲ್ಲಿ ತಡೆಯಲಿಲ್ಲ ಎಂದು ಹೇಳುವುದು ಸರಿಯಲ್ಲ. ಕೆಲವು ವಿಚಾರಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ, ಇದನ್ನು ಪರಿಶೀಲನೆ ಮಾಡಿ ಕರಿಯಾದ ತನಿಖೆ ಮಾಡಿಸುತ್ತೇವೆ. ಇನ್ನು ಮುಂದೆ ಯಾವುದೇ ರೀತಿಯಾದ ಘಟನೆಗಳು ನಡೆಯದಂತೆ ಸರ್ಕಾರ ನೋಡಿಕೊಳ್ಳುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್. — ಸ್ವಾಮಿ. ನಿಮಗೆ ಇಂತಹ ವಿಷಯಗಳ ಬಗ್ಗೆ ಸಿಟ್ಟು ಏತಕ್ಕೆ ಬರುವುದಿಲ್ಲ.

ಅಧ್ಯಕ್ಷರು.— ಸಿಟ್ಟು ಒಳ್ಳೆಯದಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೆ ಮಾನ್ಯ ಅರ್ಥ ಮಂತ್ರಿಗಳು ಕೊಡತಕ್ಕ ಉತ್ತರವನ್ನು ನೋಡಿದರೆ ನನಗೆ ಸ್ವಲ್ಪ ಅನುಮಾನ ಬರುತ್ತದೆ.

ಶ್ರೀ ಜೆ. ಹೆಚ್. ಪಟೀಲ್.— ಅಧ್ಯಕ್ಷರೆ, ಇವರಿಗೆ ಸ್ವಲ್ಪ ಅನುಮಾನ ಬರುತ್ತಿದೆ. ನನಗೆ ಮೊದಲಿನಿಂದಲೂ ಅನುಮಾನ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಧ್ಯಕ್ಷರೆ. ಪರಿಶೀಲನೆ ಎಂದರೆ ಸರಿಯಾಗುವುದಿಲ್ಲ. ತನಿಖೆ ಎಂದರೆ ನಾವು ಅರ್ಥ ಮಾಡಿಕೊಳ್ಳಬಹುದು. Serious allegations have been made and that has appeared in the press.

MR. SPEAKER.—The Honble Minister has taken note of the situation.

SRI S. R. BOMMAI.— Investigation should be made, the culprits must be booked and proper action should be taken. ನಾನು ಆದನ್ನು ಏತಕ್ಕೆ ಒತ್ತಿ ಒತ್ತಿ ಹೇಳುತ್ತಿದ್ದೇನೆ ಎಂದರೆ, ಮಾನ್ಯ ಮುಖ್ಯ ಮಂತ್ರಿಗಳು ಬಿಕ್ಕಟ್ಟನ್ನು ಪರಿಹಾರ ಮಾಡುವ ಪ್ರಯತ್ನಕ್ಕೆ ನಾವು ಸ್ವಾಗತ ಮಾಡಿದ್ದೇವೆ. ಅದಕ್ಕೆ ನಾವು ಸಹಕಾರ ಕೊಡುತ್ತೇವೆ. ಸಂಧಾನವನ್ನು ಮುರಿಯುವ ಪ್ರಯತ್ನ ನಡೆದಿದ್ದರೆ. ಆ ಬಗ್ಗೆ ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳಬೇಕು. ಇದರಲ್ಲಿ ಹೆಸರು ಹಾಕಿದವರು ಇದ್ದರೆ, ಪ್ರಕ್ಷೇದವರು ಇದ್ದರೆ, ಅವರ ಹೆಸರಿನಲ್ಲಿ ಬೇರೆ ಯಾರೇ ಮಾಡಿದ್ದರೂ ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳುವ ಬಗ್ಗೆ ಭರವಸೆ ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್.— ಅಧ್ಯಕ್ಷರೆ, ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ. ಆ ತನಿಖೆ ನಡೆಸಿ ನಾಳೆ ಆದರೂ ಇಂತಿಂಥಾದ್ದು ಆಗಿದೆ ಎಂದು ತಿಳಿಸಬೇಕು. ಪಾಂಪ್ಲೆಟ್ ಪ್ರಿಂಟ್ ಮಾಡಿಸಿದವರು ಯಾರು ಎಂದು ನಾಳೆ ತಿಳಿಸುತ್ತೀರಾ?

ಶ್ರೀ ಎಂ ವೀರಪ್ಪ ಮೊಯಿಲಿ.— ಅಧ್ಯಕ್ಷರೆ, ನಾಳೆ ತನಿಖೆ ವಿಚಾರ ತಿಳಿಸುತ್ತೀರಾ ಎಂದು ಮಾನ್ಯ ಸದಸ್ಯರು ಕೇಳಿದರೆ ಹೇಗೆ? ಯಾರು ಯಾರ ಮೇಲೆ ಕೇಸ್ ಹಾಕಿ. ಚಾರ್ಜ್‌ಷೀಟ್ ಹಾಕಿ ಕೊಡಲಿಕ್ಕೆ ಆಗುತ್ತದೆ?

ಶ್ರೀ ಜೆ. ಹೆಚ್. ಪಟೇಲ್.— ಸ್ವಾಮಿ, ಯಾರಮೇಲೂ ಕೇಸ್ ಹಾಕಿ ಎಂದು ಹೇಳಲಿಲ್ಲ ನಿಮ್ಮ ವರದಿ ಪ್ರಕಾರ ನಾಳೆ ಶ್ರೀಮಾನ್ ನಾಗಭೂಷಣ್ ಆರಾಧ್ಯರು ಏನೂ ಮಾಡಿಲ್ಲ, ಅವರು ರಾಷ್ಟ್ರಪತಿಗೆ ಅರ್ಹರು ಅವರ ಹೆಸರನ್ನು ಕಳುಹಿಸಿದ್ದೇವೆ ಎಂದು ಹೇಳಿ. ಅವರನ್ನು ಅರೆಸ್ಟ್ ಮಾಡಿ ಎಂದು ಹೇಳಲಿಲ್ಲ. ಇಂತಹ ಪಾಂಪ್ಲೆಟ್ ಇದೆ, ಇಂತಹ ಪೋಸ್ಟರ್ ಇದೆ. ಇಂತಹ ವಾತಾವರಣದಲ್ಲಿ ಇದರ ಪರಿಣಾಮ ಏನಾಗುತ್ತದೆ ಎಂದು ಗೊತ್ತಾದ ಮೇಲೆ ತಾವು ಏನು ಮಾಡಿದ್ದೀರಾ ಎನ್ನುವುದನ್ನು ತಿಳಿದುಕೊಂಡರೆ ಸಮಾಧಾನ ಮಾಡಿಕೊಳ್ಳಬಹುದು. ವಿಚಾರ ಮಾಡುತ್ತಾರೆ ಎಂದು ಸಂಮ್ಮನೆ ಕುಳಿತುಕೊಂಡರೆ, ಡೆಕ್ಕನ್ ಹೆರಾಲ್ಡ್ ಪತ್ರಿಕೆಯವರಿಗೆ ಹೆದರಿಸಿದ್ದಾರೆ. ಕನ್ನಡ ಪ್ರಭದಲ್ಲಿ ಹೇಳಿಕೆ ಬಂದಿದೆ. ಮೊದಲನೆಯದಾಗಿ ಇಂತಹ ಪಾಂಪ್ಲೆಟ್ ಬಂದಿದೆ. ಮುಖ್ಯಮಂತ್ರಿಗಳ ಮೇಲೆ ಆಪಾದನೆ ಇದೆ. ಆದುದರಿಂದ. ಇಂತಹ ಕ್ರಮ ಕೈಗೊಂಡಿದ್ದೇವೆಂದು ನಾಳೆ ಹೇಳಿದರೆ ಒಳ್ಳೆಯದು.

ಶ್ರೀ ಬಿ.ವಿ. ಕಕ್ಕಿಲಾಯ.—ಅಧ್ಯಕ್ಷರೆ, ಈಗ ಕೊಟ್ಟಿರುವ ಮಾಯಿದೆ ೧೫ನೇ ತಾರೀಖಿಗೆ ಮುಗಿಯುತ್ತದೆ. ಇನ್ನು ಮೂರು ದಿವಸದಲ್ಲಿ ಯುದ್ಧ ಶುರು ಮಾಡಿದರೆ, ಆ ಬಗ್ಗೆ ನಾವು ತಿಳಿದುಕೊಂಡಿದ್ದರೆ ತಯಾರಾಗಬೇಕಾಗುತ್ತದೆ.

ಅಧ್ಯಕ್ಷರು.—ಸಂಜೆ ಮೀಟಿಂಗ್ ಸೇರುತ್ತಿದ್ದೀರಿ. ಇದು ಮಹತ್ವವಾದ ವಿಷಯವಾದ್ದರಿಂದ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟೆ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಇಲ್ಲ. ಅದಕ್ಕೆ ಕನ್‌ಸೆಂಟ್ ಕೊಟ್ಟಿಲ್ಲ. ಮಾನ್ಯ ಸದಸ್ಯರಾದ ಫರ್ನಾಂಡೀಸ್‌ರವರು ರೂಲ್ ೩೧೨ರ ಪ್ರಕಾರ ಮಾತಾಡಿದ್ದಾರೆ. ಸಾಕಷ್ಟು ಗಂಭೀರವಾಗಿ ಪ್ರಸ್ತಾಪ ಮಾಡಿದ್ದಾರೆ. ಸಂಜೆ ಸಭೆ ಸೇರುವವರಿದ್ದೀರಿ, ಬೇಕಾದಷ್ಟು ಅವಕಾಶ ಇದೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.— ಅಧ್ಯಕ್ಷರೆ, ಈ ಪ್ರೋಸ್ಸರ್ ಮತ್ತು ಬಿತ್ತಿ ಪತ್ರದಲ್ಲಿ ನಮ್ಮ ಕಾರ್ಮಿಕರ ಬಗ್ಗೆ ತಪ್ಪು ತಿಳುವಳಿಕೆ ಬರುವಂತೆ ಇದೆ. ೪೦ ಜನ ಗೂಂಡಾಗಳು ಆಸಿಡ್, ಬಲ್ಬ್‌ಗಳು, ಸೋಡಾ ಬಾಟಲ್‌ಗಳು, ಹಾಕಿ ಸ್ಟಿಕ್, ಸ್ಪ್ಯಾನರ್, ಪೆಟ್ರೋಲ್ ಉಪಯೋಗಿಸಿಕೊಂಡು ಅವರನ್ನು ಅಟ್ಯಾಕ್ ಮಾಡಿದರೆಂದು ಹೇಳಿದ್ದಾರೆ. ನಾನು ತಿಳಿದುಕೊಂಡ ಹಾಗೆ ಆ ಬರ್ನ್ ಆದ ಕಾರಿನಲ್ಲಿ ಇದ್ದದ್ದೆ ಮೂವರೋ ಅಥವಾ ನಾಲ್ಕು ಜನ ಅಂತ ಕಾಣುತ್ತದೆ. ಇದನ್ನೆಲ್ಲಾ ಇನ್‌ವೆಸ್ಟಿಗೇಷನ್ ಮಾಡಬೇಕಾಗುತ್ತದೆ. ಆರಾಧ್ಯರು ಇದ್ದರು ಎಂದು ಕಾಣುತ್ತದೆ. ಇನ್ನೆರಡು ಶಾಲಾ ಹುಡುಗರು, ಮತ್ತು ಡ್ರೈವರ್ ಇದ್ದಿರಬಹುದು. ಅವರು ಹೇಳುವ ಹಾಗೆ, ೪೦ ಜನ ಗೂಂಡಾಗಳು ಇಷ್ಟೆಲ್ಲಾ ಉಪಕರಣಗಳನ್ನು ಉಪಯೋಗಿಸಿ ಅಟ್ಯಾಕ್ ಮಾಡಿದರೆ, ಕೇವಲ ಈ ಮೂವರು ಜೆಲ್ಲಿ ಆಗಿ ಹೋಗಬೇಕಾಗುತ್ತಿತ್ತು. ಅಂದ ಮೇಲೆ ಇವರು ಜೀವಂತವಿದ್ದುಕೊಂಡು, ನಂತರ **ಈ** ಪತ್ರವನ್ನು ಶ್ರೀಮತಿ ಇಂದಿರಾಗಾಂಧಿಗೆ ಕಳುಹಿಸುವುದಾಗಲೀ, ಅದನ್ನು ಪ್ರಕಟಿಸುವುದಾಗಲೀ, ಎಂಬ ಪ್ರಶ್ನೆಯೇ ಇರುತ್ತಿರಲಿಲ್ಲ. ಆದುದರಿಂದ ಇನ್‌ವೆಸ್ಟಿಗೇಷನ್‌ನಲ್ಲಿ ಇವೆಲ್ಲಾ ಕಂಡು ಹಿಡಿಯಬೇಕಾಗುತ್ತದೆ. ಪ್ರಕಟಿಸಿದ ವಿಚಾರ ಸತ್ಯವೋ ಅಥವಾ ಸುಳ್ಳೋ ಎಂಬುದನ್ನು ಕಂಡುಹಿಡಿಯಬೇಕಾಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಅಧ್ಯಕ್ಷರೆ, ಗೃಹಮಂತ್ರಿಗಳು ಇಲ್ಲೇ ಇದ್ದಾರೆ. ಇಂತಹ ಕೆಲಸ ಯಾರೇ ಮಾಡಿರಲಿ, ಸರಿಯಾದ ಸಿಟ್ಟಿನಲ್ಲಿ, ಅವರನ್ನು ಪನಿಷ್ ಮಾಡುವುದೇ ಅಲ್ಲ ಸಮಯ ಬಂದರೆ ಅವರನ್ನು ಅರಬಿ ಸಮುದ್ರಕ್ಕೆ ಹಾಕಿಸುತ್ತೇವೆ ಎಂದು ಈ ಮನೆಯಲ್ಲಿ ಹೇಳಬೇಕು.

MR. SPEAKER.— The statement made by the Finance Minister was on behalf of the Chief Minister.

REPRENTATIONS BY MEMBERS

† ಶ್ರೀ ಟಿ. ಚೌಡಯ್ಯ (ಭರಮಸಾಗರ).—ಮಾನ್ಯ ಅಧ್ಯಕ್ಷರೆ, ಕಳೆದ ಫೆಬ್ರುವರಿ ತಿಂಗಳು ೧೩ನೇ ತಾರೀಖು ಸಾಯಂಕಾಲ ನಿಮ್ಮವರ್ಗಕ್ಕೆ ಸೇರಿದಂಥ ಆರ್. ವೈ. ಕಬಾಡೆ ಎಂಬ ಪಾಲಿಟೆಕ್ನಿಕ್ ಪ್ರಿನ್ಸಿಪಾಲರನ್ನು ಪಠಾತ್ತಾಗಿ ೪-೫ ಜನ ಗೂಂಡಾಗಳು ಬಂದು ದೊಣ್ಣೆಯಿಂದ ಹೊಡೆದು ಮರ್ಡರ್ ಮಾಡುವ ಪ್ರಯತ್ನದಲ್ಲಿ ಒಂದು ಘಟನೆ ನಡೆಸಿದ್ದಾರೆ. ಈ ವಿಚಾರ ಪತ್ರಿಕೆಯಲ್ಲಿ ವರದಿಯಾಗಿದೆ. ಅದು ಈ ರೀತಿ ಇದೆ.

"ಬೀದರಿನ ಪಾಲಿಟೆಕ್ನಿಕ್ ಪ್ರಾಚಾರ್ಯರ ಮೇಲೆ ಹಲ್ಲೆ"

ನಿನ್ನೆ ಸಂಜೆ ಇಲ್ಲಿಯ ಸರ್ಕಾರೀ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಶ್ರೀ ಆರ್ ವೈ. ಕಬಾಡೆ ಮೇಲೆ ಹಲ್ಲೆ ನಡೆದು ಆಸ್ಪತ್ರೆಗೆ ದಾಖಲಾದ ವರದಿಯಾಗಿದೆ.

ಕಾಲೇಜಿನ ಸೂಪರಿಂಟೆಂಡೆಂಟ್‌ನೊಂದಿಗೆ ಜಾನವಾಡ ರಸ್ತೆಯ ನೀರಿನ ಟಾಕಿ ಬಳಿ ಅವರು ಬರುತ್ತಿದ್ದಾಗ ಮುಖವಾಡ ಧರಿಸಿದ್ದ ನಾಲ್ವರು ಸೈಕಲ್ಲುಗಳ ಮೇಲೆ ಆಗಮಿಸಿ ಅವರನ್ನು ದೊಣ್ಣೆಯಿಂದ ಹೊಡೆದು ಗಾಯಗೊಳಿಸಿ ಪರಾರಿಯಾದರೆಂದು ಹೇಳಲಾಗಿದೆ."

ಈ ವಿಚಾರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರಿಗೆ ತಾ : ೧೪-೨-೧೯೮೧ ರಂದು ದಲಿತ ಮತ್ತು ಮೈನಾರಿಟಿ ವರ್ಗದ ಪರವಿಯಿಂದ ನಾನು ಒಂದು ಪತ್ರವನ್ನು ಬರೆದಿದ್ದೇನೆ.....

ಅಧ್ಯಕ್ಷರು.—ತಾವು ನೋಟೀಸನ್ನು ಕಳುಹಿಸಿಕೊಟ್ಟಿದ್ದೀರಿ.

ಶ್ರೀ ಟಿ. ಚೌಡಯ್ಯ.—ಅವರ ಪ್ರಾಣಕ್ಕೆ ಯಾವ ಸಮಯದಲ್ಲಿ ಧಕ್ಕೆ ಉಂಟಾಗುತ್ತದ್ದೊ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ತಮಗೆ ಪ್ರೊಟೆಕ್ಷನ್ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಆಶ್ವಾಸನೆಯನ್ನು ಕೊಡಬೇಕು.

ಅಧ್ಯಕ್ಷರು.—ಪ್ರಾಣಕ್ಕೆ ಧಕ್ಕೆಯಾಗತಕ್ಕಂಥಾದ್ದು ಏನು ಆಗುವುದಿಲ್ಲ. ನಿಮ್ಮ ನೋಟೀಸು ಬಂದಿದೆ, ಅದನ್ನು ಹೋಂ ಕಮಿಷನರ್ ಆಫೀಸಿಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಟಿ. ಚೌಡಯ್ಯ.—ಅವರನ್ನು ಹೊಡೆದಿರುವವರು ಯಾರು, ಅವರು ಯಾವ ಪಂಥಕ್ಕೆ ಸೇರಿದವರು ಎಂಬುದನ್ನು ಹೆಸರಿನ ಸಮೇತ ಹೇಳಬಹುದು. ಆದರೆ ಅದನ್ನು ಹೇಳುವುದು ಅನವಶ್ಯಕ. ಮಾನ್ಯ ಕಬಾಡೆಯವರ ಪ್ರಾಣಕ್ಕೆ ಅಪಾಯ ಒದಗುವ ಸಂಭವವಿರುವುದಾಗಿ ಮಾನ್ಯ ಮುಖ್ಯ ಮಂತ್ರಿಯವರ